ಮನನ

ಡಾ. ಸೀ ಹೊಸಬೆಟ್ಟು

ಡಾ. ಸೀ ಹೊಸಬೆಟ್ಟು ಅಧ್ಯಯನ ಕೇಂದ್ರ, ಗೋವಿಂದ ದಾಸ ಕಾಲೇಜು
ಗೋವಿಂದದಾಸ ಕಾಲೇಜು ಅಲ್ಯುಮ್ನಿ ಆಸೋಸಿಯೇಶನ್

**** ಮನನಕ್ಕೆ ಮನವೆಲ್ಲ ಮುಡಿಪು ಮಾಡಿ
ಶಿಷ್ಯರಿಂದ ಗುರುವಿನ ನೆನಪಿಗೆ ಅರ್ಪಣೆಯಿದು
ಅವರದೇ ಕವಿತೆಯರಳುಗಳು ****

ಮನನ

ಡಾ. ಸೀ ಹೊಸಬೆಟ್ಟು

ಡಾ. ಸೀ ಹೊಸಬೆಟ್ಟು ಅಧ್ಯಯನ ಕೇಂದ್ರ, ಗೋವಿಂದ ದಾಸ ಕಾಲೇಜು
ಗೋವಿಂದದಾಸ ಕಾಲೇಜು ಅಲ್ಯುಮ್ನಿ ಆಸೋಸಿಯೇಶನ್
2023

MANANA

Collection of poems by
Dr. Hosabettu Seetharam Achar

Published by Dr. See Hosabettu Study Center, Govinda Dasa College, Surathkal and Govinda Dasa College alumni Association, Surathkal.

First Edition: 1970
Second Edition: 2023

Pages: 40 including cover pages
Price: 50.00

ಪ್ರಸ್ತಾವನೆ

ಡಾ. ಸೀ. ಹೊಸಬೆಟ್ಟು ನಮ್ಮೆಲ್ಲರ ಗುರುಗಳಾಗಿ, ಕವಿಗಳಾಗಿ, ಕಾಲೇಜಿನ ಪ್ರಾಚಾರ್ಯರಾಗಿ ಜನಪ್ರಿಯರಾಗಿದ್ದವರು. ಮಾನವೀಯತೆಯ ಪ್ರತಿಪಾದಕರಾಗಿ, ಆತ್ಮಜ್ಞಾನದ ಜಿಜ್ಞಾಸುವಾಗಿ ಅರಿವಿನ ಹಂಬಲವನ್ನು ಹೊತ್ತು ವಿದ್ಯಾರ್ಥಿಗಳಲ್ಲಿ ಜ್ಞಾನತೃಷೆ ಹಾಗೂ ಸಾಹಿತ್ಯ ಅಭಿಮಾನ ಮೂಡಿಸಿದವರು ಡಾ. ಸೀ. ಹೊಸಬೆಟ್ಟು.

'ಚಿಂತೆಗಳ ಕತ್ತಲಲ್ಲಿ ಚಿಂತನೆ ಒಂದು ಕೈ ದೀವಿಗೆ'. ಚಿಂತೆಯು ಮುಳ್ಳಿನಂತೆ ಚುಚ್ಚುತ್ತಿದ್ದರೆ, ಚಿಂತನೆ ಹೂವಿನಂತೆ ಅರಳುತ್ತದೆ' ಎಂದು ಪರಿಭಾವಿಸಿ ವ್ಯಕ್ತಿನಿಷ್ಠವಾಗಿ ಕಾಡುವ ಚಿಂತೆಗಳನ್ನು ಬೇರ್ಪಡಿಸಿ, ವಸ್ತುನಿಷ್ಠವಾಗಿ ವಿಶ್ಲೇಷಿಸಿ ಸತ್ಯದ ಕಡೆಗೆ ಮುಖ ಮುಖಿಯಾಗಿಸಿ 'ಚಿಂತನ ಮಂಥನ' ವನ್ನು ನಾಡಿಗೆ ಕೊಟ್ಟವರು ಹಾಗೂ ಅಪಾರ ಓದುಗ ಬಳಗವನ್ನು ಸೃಷ್ಟಿಸಿ ಕೊಂಡವರು.

ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯನ್ನು ಗುರುತಿಸಿ ಪ್ರಕಾಶಕ್ಕೆ ತರುವ ಹಂಬಲ ಅವರದಾಗಿತ್ತು ಹಾಗೂ ಅದರಲ್ಲಿ ಅವರು ಯಶಸ್ಸನ್ನು ಕಂಡವರು.

ಇದರಿಂದಾಗಿ ಇಂದು ಅವರನ್ನು ಕೃತಜ್ಞತೆಯಿಂದ ಜ್ಞಾಪಿಸುವ ಪ್ರೀತಿಯ ಅಪಾರ ಶಿಷ್ಯವರ್ಗ ಇದೆ.

ಡಾ. ಸೀ. ಹೊಸಬೆಟ್ಟು 4.05.1932 ರಂದು ಜನಿಸಿ 2006 ನವೆಂಬರ್ 2 ರಂದು ನಮ್ಮನಗಲಿದರು. ಡಾ. ಸೀ. ಹೊಸಬೆಟ್ಟು ಅವರ ನೆನಪಿನಲ್ಲಿ ಕಾಲೇಜಿನಲ್ಲಿ ಡಾ. ಸೀ. ಹೊಸಬೆಟ್ಟು ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲಾಯಿತು.

ಅಧ್ಯಯನ ಕೇಂದ್ರವು ಪ್ರಮುಖವಾಗಿ ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

1. ಪ್ರತಿ ವರ್ಷ ಡಾ. ಸೀ. ಹೊಸಬೆಟ್ಟು ಅವರ ಸಂಸ್ಮರಣ ಕಾರ್ಯಕ್ರಮವಾಗಿ ಕವಿಗೋಷ್ಠಿ, ವಿಚಾರ ಸಂಕಿರಣ, ಕಾರ್ಯಾಗಾರ

ಮೊದಲಾದ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು.

2. ಡಾ.ಸೀ. ಹೊಸಬೆಟ್ಟು ಅವರ ಅಪ್ರಕಟಿತ ಲೇಖನಗಳನ್ನು ಹಾಗೂ ಇತರ ಸಾಹಿತ್ಯಿಕ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

3. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲು ಆರ್ಥಿಕ ನೆರವು ನೀಡುವುದು.

4. ಸಾಹಿತ್ಯಾಸಕ್ತ ವಿದ್ಯಾರ್ಥಿಗಳ, ವಿದ್ಯಾದಾಯಿನೀ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಕವನ ಸಂಕಲನ ಹಾಗೂ ಬರಹಗಳನ್ನು ಪ್ರಕಟಿಸುವುದು.

5. ಸುರತ್ಕಲ್ ಪರಿಸರದ ಸಾಹಿತ್ಯಾಸಕ್ತ ಸಂಘಗಳ ಸಹಯೋಗದೊಂದಿಗೆ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸುವಲ್ಲಿ ನೆರವಾಗುವುದು.

ಈ ನಿಟ್ಟಿನಲ್ಲಿ ಅಧ್ಯಯನ ಕೇಂದ್ರವು ಕೆಲವು ಹೆಜ್ಜೆಗಳನ್ನಿರಿಸಿತು.

ಡಾ.ಸೀ. ಹೊಸಬೆಟ್ಟು ಅವರ ಅಪ್ರಕಟಿತ ಲೇಖನಗಳ ಹಾಗೂ ಕವನಗಳ ಸಂಗ್ರಹ 'ಸೀ-ನೆನಹು' 2007 ಡಿಸೆಂಬರ್ ರಂದು ಪ್ರಕಟಿಸಲಾಯಿತು. ಅಗಸ್ಟ್ 7 2010 ರಲ್ಲಿ ಪ್ರೊ. ಶೇಖರ ಇಡ್ಯಾ ಅವರ ನೆನಪಿನ ಕೃತಿ 'ಶೇಖರಣೆ' (ಸಂಪಾದಕರು : ಬಾಕ್ಯ ಮತ್ತು ಕೃಷ್ಣಮೂರ್ತಿ ಪಿ.) ಡಾ. ಸೀ. ಹೊಸಬೆಟ್ಟು ಅಧ್ಯಯನ ಕೇಂದ್ರ ಮತ್ತು ಕಾಳಜಿ, ಸುರತ್ಕಲ್ ಮೂಲಕ ಪ್ರಕಟಿಸಲಾಯಿತು.

ಇದರೊಂದಿಗೆ ನಿರಂತರವಾಗಿ ಸಾಹಿತ್ಯ ಕಾರ್ಯಕ್ರಮ, ಪುಸ್ತಕ ಪ್ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಕಾಲೇಜಿನಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ವಾತಾವರಣವನ್ನು ರೂಪಿಸಲಾಗಿದೆ.

'ಮನನ' ಡಾ. ಸೀ. ಹೊಸಬೆಟ್ಟುರವರನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸುವಂತೆ ಮಾಡಿದ ಕವನ ಸಂಕಲನ. ನಮ್ಮ ಸಾಫಲ್ಯ, ಸಿದ್ಧಿಗಳಿಗೆ ನಮ್ಮ ಓದು, ನಮ್ಮ ಬರಹ, ನಮ್ಮ ನಡೆ ನಮ್ಮ ನುಡಿಗಳ ಕಡೆಗೆ ಗಮನ ಕೊಡಬೇಕೆಂಬ ಆಶಯ ಕವಿಯದು. ಮನನದ ಕಡೆಗೆ ಗಮನವಿಡಿ ಎಂಬ ನಮನ ಕವನ ಸಂಕಲನದಲ್ಲಿ ಎದ್ದು ಕಾಣುತ್ತಿದೆ. 1970ರಲ್ಲಿ ಯುಗಪುರುಷ ಪ್ರಕಟಣಾಲಯದಿಂದ ಪ್ರಕಟಗೊಂಡ ಕವನ ಸಂಕಲನಕ್ಕೆ ಹಿರಿಯಕವಿ ಮೊ. ಎಸ್. ವಿ. ಪರಮೇಶ್ವರ ಭಟ್ ಅವರ ಮುನ್ನುಡಿ ಇದೆ.

2019ರಲ್ಲಿ ಆರಂಭಗೊಂಡ ಗೋವಿಂದದಾಸ ಕಾಲೇಜು ಅಲ್ಯುಮ್ನಿ ಆಸೋಸಿಯೇಶನ್ ಶೈಕ್ಷಣಿಕ-ಸಾಂಸ್ಕೃತಿಕ-ಕ್ರೀಡಾ ಹಾಗೂ ಸಾಮಾಜಿಕ ಚಟುವಟಿಕೆಗಳಿಂದ ಕಾಲೇಜಿನ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ವಿಶೇಷವಾಗಿ ಸಹಕರಿಸುತ್ತಿದೆ. 2022-23ನೇ ವಾರ್ಷಿಕ ಹಬ್ಬದ ಸಲುವಾಗಿ ನಲುಮೆಯ ನೆನಪಿನ ಸಂಚಿಕೆ - 'ಸಂಗಮ ಸಂಭ್ರಮ' ಪ್ರಕಟಗೊಳಿಸುವಾಗ ನಲ್ಮೆಯ ಗುರುಗಳಿಗೆ ಗುರುಕಾಣಿಕೆಯಾಗಿ 'ಮನನ' ಕವನ ಸಂಕಲನವನ್ನು ಪುನರ್ ಪ್ರಕಟಿಸುವ ಆಲೋಚನೆ ಮಾಡಲಾಯಿತು.

ಅಲ್ಯುಮ್ನಿ ಆಸೋಯೇಶನ್‌ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸಂತಸದಿಂದ ಈ ಕಾರ್ಯಕ್ಕೆ ಒಪ್ಪಿಗೆ ನೀಡಿದರು. ಗೋವಿಂದ ದಾಸ ಕಾಲೇಜು ಅಲ್ಯುಮ್ನಿ ಆಸೋಸಿಯೇಶನ್ ಮತ್ತು ಕಾಲೇಜಿನ ಆಡಳಿತ ಪರಿಷತ್ ಹಾಗೂ ಹಿಂದೂ ವಿದ್ಯಾದಾಯಿನೀ ಸಂಘದ ಸರ್ವರಿಗೂ ವಂದನೆಗಳು.

ಡಾ.ಸೀ.ಹೊಸಬೆಟ್ಟು ಅವರ ಪುತ್ರರೂ ಹಾಗೂ ನಮ್ಮ ಆತ್ಮೀಯ ಗೆಳೆಯರಾದ ಶ್ರೀ ಮೋಹನ್ ಹೊಸಬೆಟ್ಟು ಹಾಗೂ ಶ್ರೀ ವಸಂತ ಹೊಸಬೆಟ್ಟು ಅನುಮತಿಯಿತ್ತು ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ.

ಕರ್ತವ್ಯದ ಕಡೆಗೆ ಗಮನ ಕೊಡುವುದು, ನಡೆಯ ಸವಿಯನ್ನು ಹರಡುವುದರೊಂದಿಗೆ ನುಡಿಯ ಬೆಳಕನ್ನು ಪರಿಸರಿಸುವುದು ಸಂಸ್ಕೃತಿಯ ಕಾರ್ಯ, ನಮ್ಮ ನಡೆನುಡಿಗಳಲ್ಲಿ ಸವಿ ಬೆಳಕು ತುಂಬಿದೆಯೇ ಎಂಬ ವಿವೇಚನೆ ಬೇಕೆಂಬ ಚಿಂತನೆ ಡಾ. ಸೀ. ಹೊಸಬೆಟ್ಟು ಅವರದ್ದು. ಈ ಹಿನ್ನಲೆಯಲ್ಲಿ ನುಡಿಯ ಬೆಳಕನ್ನು ಪಸರಿಸುವ ಸಂಸ್ಕೃತಿಸಂಪನ್ನರಾಗಿ ಈ ಕರ್ತವ್ಯವನ್ನು ನೆರವೇರಿಸಿದ್ದೇವೆ ಎಂಬ ವಿನೀತ ಭಾವದೊಂದಿಗೆ ಸಹಕರಿಸಿರುವ ಸರ್ವರಿಗೂ ನಮನವನ್ನು ಸಲ್ಲಿಸುತ್ತಿದ್ದೇವೆ.

ಪ್ರೊ. ಕೃಷ್ಣಮೂರ್ತಿ ಪಿ.

ಪ್ರಾಂಶುಪಾಲರು

ಮನನ-ನಮನ

ಆಚಾರ್ಯ ಎಂದರೆ:
ಆ = ಆವಿರ್ಭಾವ
ಚ = ಚರ್ವಣ
ಆರ್ಯ = ಬೆಳಕು ಬೀರು
ಆಚಾರ್ಯರೆಂದರೆ:
ಮೂಲದಿಂದ ಮೇಲೆದ್ದವರು
ಅಕ್ಷರಶಃ ಅನ್ವರ್ಥರು
ಬೆವರು ಸುರಿಸಿ,
ಕಣ್ಣೀರು (ಅದು ಆನಂದಾಶ್ರುವೇ ಇರಲಿ!)
ಸುರಿಸಿ-
'ಕೃಷಿ' ನಡೆಸಿದವರು.
ಆಚಾರ್ಯರೆಂದರೆ:
ಗುರುದಾರಿಯಲ್ಲಿ ನಡೆದವರು
ಸೌಟು, ಲೇಖನಿ ಸಮತೋಲ ತೋರಿ
ನೋವಿನಲ್ಲಿ/ಲ್ಲೂ ನಕ್ಕು ಲಘುವಾದವರು.
ಬಿಗುವಾಗದವರು, (ಅದರಿಂದ) ಗುರುವಾದರು.
ಆಚಾರ್ಯರೆಂದರೆ:
ವಾಸ್ತವದ ಅರ್ಚಕರು,
ಅಲ್ಲವನ್ನು ಹೌದೆಂದವರು
ಅದೇ ಹೌದರ 'ನಕಾರ' ಪ್ರವಾಚಕರು.
ಜೀವನವಿಡೀ 'ಕಾಲ-ಕೂಟ ಬದಲಾಯಿಸಿದರೂ'
ಬದಲಾಗದವರು.
ಆಚಾರ್ಯರೆಂದರೆ:
ನಮ್ಮ ನಿಮ್ಮಲ್ಲಿ ನೆನಪಾದವರು
ನುಡಿದಂತೆ ನಡೆದು ಹೊಳಪಾದವರು
ನವದಿಗಂತವ್ಯಾಪ್ತಿಯ ಅನಂತ ದೀಪ್ತಿಯಲ್ಲೊಂದಾದವರು.

ಡಾ. ಸಾಯಿಗೀತಾ

'ಮನನ'ಕ್ಕೆ ಮುಡಿಪು

ಗೋವಿಂದದಾಸ ಕಾಲೇಜು ಅಲ್ಯುಮ್ನಿ ಅಸೋಸಿಯೇಶನ್ ವತಿಯಿಂದ " –'ಮನನ'ಕ್ಕೆ ಮನವೆಲ್ಲ ಮುಡಿಪು ಮಾಡಿ" – ಡಾ. ಸೀ ಹೊಸಬೆಟ್ಟು ಅವರ ಶಿಷ್ಯರು ಜೊತೆಗೂಡಿ ಮನನದ ಮರುಮುದ್ರಣ ತರುವ ಮನ ಮಾಡಿದ್ದೇವೆ. 'ಮನನ'ದಲ್ಲಿನ ಕವನಗಳು ಮತ್ತೆ ಮತ್ತೆ ಮನನ ಮಾಡಬೇಕಾದವುಗಳು – ಮನನಯೋಗ್ಯವಾದವುಗಳು.

ರಸನಿಮಿಷವೆಂಬ ಶೀರ್ಷಿಕೆಯಿರುವ ಕವನದ

"ಸ್ವಪ್ನ–ಸುಧೆಯ ಮೇಲೆ ಜೀವ ಹಂಸೆಯಾಗಿ ಈಸಿದೆ!

ಬಾಳ ಹೊಳೆಯ ಕೆಸರು ಕೊಳೆಯನೊಮ್ಮೆ ತಾನು ಮರೆತಿದೆ!" ಎಂಬ ರಮ್ಯ ಚರಣಗಳಾಗಲಿ

'ಕಾಲ ಕವಿರಚಿತ ಧ್ವನಿಪೂರ್ಣಕಾವ್ಯ'–
ಎಂಬ ನಿನ್ನ ಹೆಗ್ಗಳಿಕೆ
ಧ್ವನಿಶೂನ್ಯ ಚಿತ್ರ ಚಮತ್ಕಾರ ಭೂಷಣವಾಗಿ–
ಸವೆದ ಕವಿಸಮಯವಾಯ್ತು–
ಸಮಯ!

ಎಂಬ 'ಗಡಿಯಾರ' ಕವನದ ನವ್ಯ ಸಾಲುಗಳಾಗಲಿ ಅವರ ಜೀವನದ ಪ್ರತಿಹೆಜ್ಜೆಯನ್ನು ಪ್ರತಿಬಿಂಬಿಸುತ್ತಿದೆಯೇನೋ ಅನ್ನಿಸುವಂತಿದೆ.

'ಪಂಪಸ್ಮರಣೆ' ಕವಿತೆಯಂತೂ ಅದೆಷ್ಟೋ ವಿದ್ಯಾರ್ಥಿಗಳ ಮನಸಿಗೆ ಬಹು ಇಷ್ಟವಾದ ಕವಿತೆಯಾಗಿ, ಪರೀಕ್ಷೆಗೆ ಉಲ್ಲೇಖಿಸಬಲ್ಲ ಸಾಲುಗಳಾಗಿ ಮನದೊಳಗೆ ಉಳಿದು ಬಂದಿವೆ.

ಅವರ ತರಗತಿಯೊಳಗಿನ ಹಾಗೂ ಹೊರಗಿನ ನಲುನೆನಪುಗಳು– ನೋವಿನ ಗುರುತುಗಳು ಎಲ್ಲವನ್ನೂ ಈಗ ನೆನಪಿಸಿಕೊಂಡಾಗ ನಮ್ಮ ಅನುಭವದೊರತೆಗೆ ಕೊರತೆಬಾರದಂತೆ ಅವು ಒತ್ತುಕೊಟ್ಟಿದ್ದವು

ಎಂಬುದನ್ನಿಲ್ಲಿ ಉಲ್ಲೇಖಿಸಲೇ ಬೇಕಾಗುತ್ತದೆ. ಒಂದು ದಿನ ಐಚ್ಛಿಕ ಕನ್ನಡ ತರಗತಿಯಲ್ಲಿ ಗುಬ್ಬಚ್ಚಿಯೊಂದು ಮಿಡಿತೆಯನ್ನು ಹಿಡಿಯಲು ಯತ್ನಿಸುತ್ತಿದ್ದುದನ್ನು ಸುಮ್ಮನೆ ನೋಡುತ್ತಾ ಹೊತ್ತಷ್ಟು ಕಳೆದು ಹೋದುದು, ಮಿಡಿತೆ ಗುಬ್ಬಚ್ಚಿಗೆ ಆಹಾರವಾದ ಬಳಿಕ ಆ ಕುರಿತು ಕವಿತೆ ಬರೆಯಲು ಹೇಳಿ. ಕವಿತೆಯೊಂದನ್ನು ಬರೆದುಕೊಟ್ಟಾಗ ಅದರಂತೆಯೇ ಇನ್ನೊಂದು ಕವನ ತನ್ನ 'ಮನನ'ದಲ್ಲಿದೆಯೆಂದು ಆಚಾರ್ಯರು ಹೇಳಿದುದು ಅಚ್ಚಳಿಯದೆ ನೆನಪಿನಲ್ಲಿದೆ. ಹೌದು, ಮನನದ 'ದೇವ' ಎಂಬ ಕವಿತೆ ಇಂತಹದೇ ಸಂದರ್ಭದಲ್ಲಿ ಮೂಡಿ ಬಂದಿರಬೇಕು.

'ಮನನ' ಕವನಸಂಕಲನವನ್ನು ಆಚಾರ್ಯರು ನನ್ನ ಕೈಗಿತ್ತ ದಿನವನ್ನಿಲ್ಲಿ ಹೇಳಲೇ ಬೇಕು (26–02–1987). ಹೊಸಗನ್ನಡದ ಮುಂಗೋಳಿ ಎಂದು ಕರೆಸಿಕೊಂಡ ಮುದ್ದಣನ ಊರು ನಂದಳಿಕೆಗೆ ವಿದ್ಯಾರ್ಥಿಗಳಾದ ನಮ್ಮನ್ನು ಕರೆದೊಯ್ದು, ಮುದ್ದಣನನ್ನು ಪರಿಚಯಿಸಿದುದಲ್ಲದೆ ಆ ದಿನದ ಸವಿನೆನಪಿಗೆ ಈ ಪುಸ್ತಕವನ್ನು ಆಚಾರ್ಯರು ನನಗಿತ್ತಿದ್ದಾರೆ. ಮನನವನ್ನು ಮನನ ಮಾಡುವ ಕ್ರಿಯೆಗೆ ಶ್ರೀಕಾರ ಹಾಕಿದ್ದಾರೆ. ಮಾತುಮಾತಿನಲ್ಲಿ 'ಮನನ'ಕ್ಕೆ ಮುನ್ನುಡಿ ಬರೆದಿದ್ದ ತನ್ನ ಗುರು 'ಎಸ್‌ವಿಪಿ'ಯವರಂತೆ ತಾನೂ ಒಂದು ಕೈಯಲ್ಲಿ ಸೌಟು, ಒಂದು ಕೈಯಲ್ಲಿ ಪೆನ್ನು ಹಿಡಿದಿದ್ದೇನೆನ್ನುತ್ತ ತನ್ನ ಬದುಕಿನ ಕುರಿತು ಹೇಳಿದ್ದವರು, ತಮ್ಮ ಮತ್ತೊಂದು ಮದುವೆಯ ಬಳಿಕ 'ನನ್ನದು ಸಾಹಿತ್ಯ ಕೃಷಿ, ನನ್ನವಳದು ನಿಜದ ಕೃಷಿ' ಎಂದಿದ್ದರು. ಈಗ ಗುರುಗಳು, ಗುರುಪತ್ನಿ ಇಬ್ಬರೂ ನೆನಪಾಗಿ ಉಳಿದಿದ್ದಾರೆ.

1970ರಲ್ಲಿ ಪ್ರಥಮ ಮುದ್ರಣವನ್ನು ಕಂಡಿದ್ದ 'ಮನನ'ದ ಪುನರ್ಮುದ್ರಣದ ಈ ಸಂದರ್ಭದಲ್ಲಿ ಅವರ ಈ ಕವನ ಸಂಕಲನದ ಬಗೆಗೆ ಭಾವನಾತ್ಮಕ ಸಂಬಂಧಗಳನ್ನು ಹೊಂದಿರುವಂಥವರ ಬರೆಹಗಳನ್ನೂ ಇಲ್ಲಿ ಜೊತೆಗಿ- ರಿಸಲಾಗಿದೆ. ಅವರಲ್ಲಿ ಒಬ್ಬರು ಹಿರಿಯರಾದ ಡಾ. ರಮಾನಂದ ಬನಾರಿ. ಸೀ.ಹೊಸಬೆಟ್ಟು ಅವರ ಕವನ 'ಪ್ರಶ್ನೆ– ಪ್ರಶ್ನೆ' ಎಂಬ ಕವನವು 1985ರ ಬಳಿಕ ಉದಯವಾಣಿ ದಿನಪತ್ರಿಕೆಯಲ್ಲಿ ಒಮ್ಮೆ ಪ್ರಕಟವಾಗಿತ್ತು. ಅದನ್ನು ಓದಿದ ಡಾ. ಬನಾರಿಯವರು 'ಪ್ರಶ್ನೆಗೆ ಉತ್ತರ'ವೆಂಬ ಶೀರ್ಷಿಕೆಯೊಡನೆ ಕವನವೊಂದನ್ನು ಬರೆದಿದ್ದು, ಅದೂ ಉದಯವಾಣಿಯಲ್ಲಿ ಪ್ರಕಟವಾಗಿ- ತ್ತು. ಅದನ್ನು ಓದಿದ ನೆನಪಿನಲ್ಲಿ – ಆ ಕಾವ್ಯಸಂವಾದದ ಕುರಿತು ಡಾ. ಬನಾರಿಯವರೊಡನೆ ಮಾತನಾಡಿದಾಗ, ಅವರು ತಮ್ಮ ಮತ್ತು ಸೀ.ಹೊಸಬೆಟ್ಟು ಅವರ ಆಪ್ತತೆಯ ಬಗೆಗೆ ಹೇಳಿಕೊಂಡರು. ಅದನ್ನೇ ಬರೆಯಲು ಹೇಳಿದಾಗ ಬಹುಪ್ರೀತಿಯಿಂದ ಬರೆಯಲೊಪ್ಪಿಕೊಂಡು, ಹೊತ್ತಿನೊಳಗೆ ಬರೆದು ಕಳುಹಿಸಿದ್ದಾರೆ. ಪ್ರಶ್ನೆಗೆ ಉತ್ತರವಾಗಿ ಬಂದಿದ್ದ ಕವಿತೆ ಕಳೆದುಹೋದರೂ ಅದರ ಸಾಲು– ಅವರಿಗೆ ನೆನಪಿರುವುದನ್ನು ಅದರಲ್ಲಿ ನೀಡಿದ್ದಾರೆ.

ಸೀ. ಹೊಸಬೆಟ್ಟು ಹಾಗೂ ತಮ್ಮ ನಡುವಿನ ಗುರು–ಶಿಷ್ಯ ಆಪ್ತತೆಯನ್ನು ಕಾಲೇಜು ಪ್ರಾಂಶುಪಾಲರಾದ ಪ್ರೊ. ಕೃಷ್ಣಮೂರ್ತಿಯವರೂ ಪ್ರಸ್ತಾವನೆಯಲ್ಲಿ ದಾಖಲಿಸಿದ್ದಾರೆ ನಮ್ಮ ಜೊತೆಗಾರ ಶ್ರೀ ಗೋಪಾಲಕೃಷ್ಣ ಕುಂಬಳೆ ಅವರು 'ಮನನ'ಕ್ಕೆ ಅರ್ಥಪೂರ್ಣವಾದ ಮುಖಪುಟ ಹಾಗೂ ಒಳ ಪುಟಗಳ ವಿನ್ಯಾಸ ಮಾಡಿ ಮುದ್ರಣಕ್ಕೆ ತಯಾರು ಗೊಳಿಸಿದ್ದಾರೆ. .... ಸುಂದರವಾಗಿ ಮುದ್ರಿಸಿದ್ದಾರೆ. ಸಹಕರಿಸಿದವರೆಲ್ಲರ ಕೊಡುಗೆಗೆ ವಂದನೆಗಳು.

ಆಚಾರ್ಯರಂತಹ ಆಚಾರ್ಯರಿಗೆ, ಅವರನ್ನು ಗುರುವಾಗಿ ನೀಡಿದ ವಿದ್ಯಾಸಂಸ್ಥೆಗೆ ನಾವು ಯಾವತ್ತೂ ಋಣಿಗಳು.

ಡಾ. ಸಾಯಿಗೀತಾ

ಗಾಢವಾಗಿ 'ಕವಿ'ಯುವ

ಡಾ. ಸೀ ಹೊಸಬೆಟ್ಟು

ಡಾ. ಸೀ. ಹೊಸಬೆಟ್ಟು ಅವರು ನಮ್ಮ ನಾಡಿನ ಅಗ್ರಮಾನ್ಯ ವಿದ್ವಾಂಸರಲ್ಲೊಬ್ಬರು. ಸಂಸ್ಕೃತಿ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯಂತ ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದವರು. ಸರಳವೂ, ವಿರಳವೂ ಆದ ವ್ಯಕ್ತಿತ್ವದಿಂದ ಸೌಹಾರ್ದ ನಡೆನುಡಿಗಳಿಂದ ಸಂಪರ್ಕಕ್ಕೆ ಬಂದವರಲ್ಲೆಲ್ಲ ಅಚ್ಚಳಿಯದ ನೆನಪುಗಳನ್ನು ಉಳಿಸಿ ಹೋದವರು.

ಇದು ವೈಯಕ್ತಿಕವಾಗಿ ನನ್ನ ಅನುಭವ ಕೂಡ. ಅನೇಕ ಬಾರಿ ಅವರೊಂದಿಗೆ ನಿಕಟವಾದ ಒಡನಾಟದ ಭಾಗ್ಯಕ್ಕೆ ಭಾಗಿಯಾಗಿರುವ ನಾನು ಸಂಘಟಿಸಿದ ಸಂಸ್ಕೃತಿ ಸಾಹಿತ್ಯ ಸಂಭ್ರಮಗಳಲ್ಲಿ ಸಂಪೂರ್ಣ ನಿಸ್ವಾರ್ಥದಿಂದ ಸಹಕರಿಸಿದವರು.

ನಮ್ಮ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘದ ಕಾರ್ಯಕ್ರಮಕ್ಕೂ ಬಂದಿದ್ದರು. ನನ್ನ ತೀರ್ಥರೂಪರ ಸಂಸ್ಮರಣಗ್ರಂಥಕ್ಕೆ ಮೌಲಿಕವಾದ ಲೇಖನವನ್ನೊದಗಿಸಿ ತಂದೆಯವರಿಗೆ ಗೌರವವನ್ನು ಸಮರ್ಪಿಸುವ ಮೂಲಕ ನಮಗೆ ಧನ್ಯತೆಯನ್ನು ಉಂಟುಮಾಡಿದ್ದರು. ಮೂಲತಃ ಅಧ್ಯಾಪಕರಾಗಿದ್ದ ಹೊಸಬೆಟ್ಟು ಅವರು ತನ್ನ ಕ್ಷೇತ್ರದಲ್ಲಿ ಮಿಂಚಿದವರು. ಸಮೀಪಕ್ಕೆ ಬಂದವರಿಗೆಲ್ಲ ತನ್ನ ಜ್ಞಾನವನ್ನು ಹಂಚಿದವರು. ನಿಜಾರ್ಥದ ಅಧ್ಯಾಪಕರಾಗಿದ್ದವರು.

ಆಚಾರ್ಯರು ಸರಸ ಸಂಭಾಷಣಾ ಚತುರರಾಗಿದ್ದರು. ಒಂದು ಸಂದರ್ಭ ಆಗಾಗ ನೆನಪಾಗುತ್ತಲೇ ಇರುತ್ತದೆ. ನಮ್ಮ ಬನಾರಿಯ ಒಂದು ಕಾರ್ಯಕ್ರಮಕ್ಕೆ ಅವರು ಮತ್ತು ಅಮೃತರು ನನ್ನೊಂದಿಗೆ ನನ್ನದೇ

ವಾಹನದಲ್ಲಿ ಸಹಪ್ರಯಾಣಿಕರಾಗಿ ಬಂದಿದ್ದರು. ಅವರಿಬ್ಬರೂ ವೃತ್ತಿ ಬಾಂಧವರು, ಸಮಾನ ವಯಸ್ಕರು ಮತ್ತು ಸಮಾನ ಮನಸ್ಕರು. ನಾನು 'ಸ್ವಲ್ಪ ಜೂನಿಯರ್'. ಅವರ ಸಂಭಾಷಣೆಯನ್ನು ಸುಮಾರು ಒಂದು ತಾಸಿಗಿಂತಲೂ ಹೆಚ್ಚು ಕಾಲ ಏಕಾಗ್ರತೆಯಿಂದ ಆಲಿಸಿ (ಚಾಲಕನಾಗಿ ನನಗದು ಅನಿವಾರ್ಯವಾಗಿತ್ತು ಕೂಡ) ಮನಸಾರೆ ಬಾಯಿ ಮುಚ್ಚಿ ನಗುವುದು ತುಂಬ ಆಹ್ಲಾದಕರ ಅನುಭವವಾಗಿತ್ತು. ದೊಡ್ಡ ದೊಡ್ಡ ವಿದ್ವಾಂಸರ ಸಾಹಿತಿಗಳ ಬದುಕಿನ ಕೆಲವು ಒಳಸುಳಿಗಳೂ ರಸಿಕತನವೂ ಅವರ ಮಾತುಗಾರಿಕೆಯಲ್ಲಿ ಪ್ರಸ್ತಾಪಿತವಾಗಿತ್ತು.

ಹೊಸಬೆಟ್ಟು ಅವರ ಒಂದು ಶೃಂಗಾರಭರಿತ ಕವನ (ಪ್ರೇಮಕವನ?) ಒಮ್ಮೆ ಉದಯವಾಣಿಯಲ್ಲಿ ಪ್ರಕಟವಾಗಿತ್ತು. ಅದಕ್ಕೆ ಕವನದ ರೂಪದ ಒಂದು ಉತ್ತರವನ್ನು ನಾನು ಬರೆದೆ. ಅವರಿಗೆ ತುಂಬ ಖುಷಿಯಾಯಿತು. ಮತ್ತೆ ಕವನದಲ್ಲೇ ಪ್ರತ್ಯುತ್ತರವೂ ಬಂತು. ಬಹುಶಃ ಹೀಗೊಂದು ಕಾವ್ಯಸಂಭಾಷಣೆ ಸಂಭವಿಸಿದ್ದು ಅದೇ ಮೊದಲಾಗಿರಬಹುದು. ಅವರ ಕವನದ ಪ್ರಾರಂಭದಲ್ಲಿ 'ಮೀನಾಕ್ಷಿ' ಎನ್ನುವ ಶಬ್ದವಿತ್ತು. ನಾನು ಅದನ್ನೇ ಎತ್ತಿಕೊಂಡು 'ಮೀನಾಕ್ಷಿ ಎಂದೆನ್ನ ಕರೆಯುವೆಯ ರಸಿಕನೇ, ಪ್ರೇಮಕಾಸಾರದಲಿ ನಾನು ಮೀನು.. ಈಜಾಡ ಬರುವೆಯೇನು?' ಎಂದು ಬರೆದಿದ್ದೆ. ಉಳಿದ ಸಾಲುಗಳು ಈಗ ನೆನಪಾಗುವುದಿಲ್ಲ.

ಆಚಾರ್ಯರು ನಮ್ಮ ಮಂಜೇಶ್ವರ ಮನೆಗೆ ಬಂದು ಹೋದ ನೆನಪು ಈಗಲೂ ಹಸಿರಾಗಿಯೇ ಉಳಿದಿದೆ. ಈ ಲೇಖನಕ್ಕೆ ಅಣಿಯಾಗುತ್ತಿರುವ ಹೊತ್ತಿನಲ್ಲಿ ನನ್ನ ಶ್ರೀಮತಿಯವರೂ ಅವರ ನಡೆನುಡಿಗಳನ್ನು ಮೆಚ್ಚಿ ಮಾತಾಡಿದ್ದು ಒಬ್ಬ ಗೃಹಿಣಿಯಿಂದ ಅವರಿಗೆ ಸಂದ ಒಂದು ಸಣ್ಣ ಪ್ರಶಸ್ತಿಯೋ ಎಂಬಂತೆ ಭಾಸವಾಯಿತು.

ವೈಯಕ್ತಿಕ ಬದುಕಿನಲ್ಲಿ ಅವರು ಸಾಕಷ್ಟು ನೋವುಂಡವರು ಎಂದು ನಾನು ಕೇಳಿದ್ದೇನೆ. ಅವರೊಂದಿಗೆ ಮಾತನಾಡುವಾಗ ಈ ಕುರಿತು ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಕ್ಕೆ ಅವರು ತಕ್ಷಣ ಕೊಟ್ಟ ಉತ್ತರ 'ನಾನು ಅನುಕಂಪವನ್ನು ಬಯಸುವುದಿಲ್ಲ. ನಾನು ಸುಖವಾಗಿಯೇ ಇದ್ದೇನೆ'. ಪ್ರಾಯಃ ವಾಸ್ತವವನ್ನು ಧನಾತ್ಮಕವಾಗಿ ಆವಾಹಿಸಿಕೊಳ್ಳಬೇಕೆಂಬುದು ಅವರ ಧೋರಣೆಯಾಗಿರಬೇಕು.

ಬದುಕಿನ ಉತ್ತರಾರ್ಧದ ಕೊನೆಯ ವರ್ಷಗಳಲ್ಲಿ ಅವರು ಹೊಸಬದುಕನ್ನು ಕಟ್ಟಿಕೊಂಡದ್ದು ಸಮಾಜಕ್ಕೆ ನೀಡಿದ ಒಂದು ಕಾವ್ಯಾತ್ಮಕವಾದ ಸಂದೇಶವೇ ಆಗಿತ್ತು. ಎಷ್ಟಾದರೂ ಅವರು ಕವಿ ಅಲ್ಲವೇ?

ಡಾ. ರಮಾನಂದ ಬನಾರಿ ಮಂಜೇಶ್ವರ
ನಿಸರ್ಗಕಲಾ ನಿಲಯ, ಗುಡ್ಡಡ್ಕ, ಕನಕಮಜಲು ಗ್ರಾಮ
ಪೆರ್ನಾಜೆ ಅಂಚೆ 574 223, ಸುಳ್ಯ ತಾಲೂಕು, ದ.ಕ. ಜಿಲ್ಲೆ

ಅಧ್ಯಕ್ಷರು, ಕೀರಿಕ್ಕಾಡು ಸ್ಮಾರಕ ಯಕ್ಷಗಾನ ಸಾಂಸ್ಕೃತಿಕ ಅಧ್ಯಯನ ಕೇಂದ್ರ
ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘ,
ಅಂಚೆ ಪಂಜಿಕಲ್ಲು, 671 543, ಕಾಸರಗೋಡು ಜಿಲ್ಲೆ

ಮುನ್ನುಡಿ

ಒಬ್ಬ ಸಾಹಿತಿ ಮತ್ತೊಬ್ಬ ಸಾಹಿತಿಯನ್ನು ಗುರುತಿಸುವಾಗ, ಗೌರವಿಸುವಾಗ ನಿರ್ಮತ್ಸರನಾಗಿ, ನಿಷ್ಪಾಕ್ಷಿಕವಾಗಿ ಪೂರ್ವಗ್ರಹಗ್ರಸ್ತನಾಗದೆ, ಸಹಜ ಸುಂದರ ಸಜ್ಜನಿಕೆಯನ್ನು ಮೆರೆದು ಗುರುತಿಸಬೇಕು, ಗೌರವಿಸಬೇಕು. ಇದು ನನ್ನ ನಿಲುವು. ಲೋಕಕಲ್ಯಾಣ ಸಾಧಕರಾದ ಬಸವಣ್ಣನವರು ಶಿವಶರಣರನ್ನೂ, ಜಂಗಮರನ್ನೂ ಗುರುತಿಸುವಲ್ಲಿ ಅನುಸರಿಸಿದ ರೀತಿ, ನೀತಿಗಳೇ ಈ ಸಂದರ್ಭಕ್ಕೂ ಅನುಸರಣ ಯೋಗ್ಯವಾಗಿವೆ ಎಂದು ನಾನು ಭಾವಿಸಿದ್ದೇನೆ.

"ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು ಕಂತೆಬೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದರೆ ಪಂಚಮಹಾಪಾತಕ" ಎಂದು ಅವರು ಒಂದೆಡೆ ಹೇಳಿದ್ದಾರೆ.

"ಉತ್ತಮ, ಮಧ್ಯಮ, ಕನಿಷ್ಟವೆಂದು ಬಂದ ಜಂಗಮವನೆಂದೆನಾದರೆ ನೊಂದೆನಯ್ಯಾ, ಬೆಂದೆನಯ್ಯಾ, ಎನ್ನ ಕಿಚ್ಚು ಎನ್ನ ಸುಟ್ಟಿತ್ತು. ಸುಖಿ ಜಂಗಮ ಸಾಮಾನ್ಯ ಜಂಗಮವೆಂದುಂಟೆ?" – ಎಂದು ಇನ್ನೊಂದೆಡೆ ಉದ್ಗಾರವೆತ್ತಿದ್ದಾರೆ.

"ಬೇಜೂರಲಿದ್ದು ಬಂದ ಜಂಗಮವೇ ಲಿಂಗವೆಂದು ಮನೆಯಲಿದ್ದ ಜಂಗಮನುದಾಸೀನ ಮಾಡಿದೆನಾದರೆ ನಾನು ಬೆಂದೆನಯ್ಯಾ" ಎಂದು ಇನ್ನೊಮ್ಮೆ ಅವರು ಕಾವುಗೊಂಡು ನುಡಿದಿದ್ದಾರೆ. 'ದೂರದಿಂದ ಬಂದ ಜಂಗಮವನಯ್ಯಗಳೆಂದು ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯಾ' ಎಂದು ಮತ್ತೊಮ್ಮೆ ಅವರು ನುಡಿದಿದ್ದಾರೆ.

'ಕಳ್ಳ, ಬಂದಿಕಾಜಿ, ಹಾವಾಡಿಗ, ಹಾದರಿಗ, ಬಂಟ, ಓಲೆಯಕಾಜಿ ಎಂದೆನಾದರೆ ನೀ ಮುಂತಾಗಿ ಬಂದ ಭಕ್ತರ ನೀ ಎನ್ನದಿದ್ದರೆ ಅದೇ ದ್ರೋಹ'– ಎಂಬುದು ಅವರ ಇನ್ನೊಂದು ಮಾತು. ಬಡವ, ಬಲ್ಲಿದ; ಹಿರಿಯ–ಕಿರಿಯ, ಸುಖಿ, ದುಃಖಿ; ಸರ್ವಮಾನ್ಯ, ಸಾಮಾನ್ಯ; ಸುರೂಪಿ, ಕುರೂಪಿ; ಸ್ವಕೀಯ, ಪರಕೀಯ; ಮೇಲಿನವನು, ಕೀಳಿನವನು ಇತ್ಯಾದಿ ಭೇದಭಾವಗಳನ್ನು ತೊರೆದು ಹೃದಯದ ಔದಾರ್ಯವನ್ನು ಮೆರೆದು ಸಾನುಕ್ರೋಶಪರನಾಗಿ ತಾನು ಎಲ್ಲರಂತೆ, ಎಲ್ಲರೂ 'ತನ್ನಂತೆ ಎಂಬ ಶಿವಾದ್ವೈತ ಬುದ್ಧಿಯಿಂದ ಒಬ್ಬರು ಒಬ್ಬರನ್ನು ಗುರುತಿಸಿ, ಗೌರವಿಸುವುದೇ ಇಬ್ಬರೂ ಉಳಿದು, ಬೆಳೆದು ನಲಿಯುವುದಕ್ಕೆ ಇರುವ ಏಕೈಕ ಮಾರ್ಗ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಮಾರ್ಗ ಧರ್ಮಾನುಯಾಯಿಗೆ ಹೇಗೆ ತೆರೆದದ್ದು ಹಾಗೆಯೇ ಕಾವ್ಯಧರ್ಮಾನುಯಾಯಿಗೂ ಹಾಗೆಯೇ ತೆರೆದದ್ದು. ಇದು ಬಸವಣ್ಣನವರು ನನಗೆ ತೋರಿದ ದಾರಿ, ತೆರೆದ ದಾರಿ. ನಾನು ನಡೆದು ಬಂದ ದಾರಿ ಅವರು ನಿಕಷಹಸ್ತರು. ಮೃತಾಮೃತರ, ಕ್ಷರಾಕ್ಷರರ ವಿಷಯ ವಿವೇಚನೆ ಅಂತಹವರಿಂದ ಸಾಧ್ಯ.

ಈ ದಾರಿಯಲ್ಲಿ ಈ ಹೊತ್ತು ಎದುರಿಗೆ ಬಂದು ಕುಶಲ ಪ್ರಶ್ನೆಗೆ ಕವಿ ಸೀ. ಹೊಸಬೆಟ್ಟು ಅವರನ್ನು ಸಹಜವಾಗಿ ಗುರುತಿಸಿ, ಗೌರವಿಸುವ ಭಾಗ್ಯ ನನ್ನದಾಯಿತು.

ಶ್ರೀ ಸೀ. ಹೊಸಬೆಟ್ಟು ಅವರು ಕನ್ನಡದ ಪ್ರಾಚಾರ್ಯರಾಗಿ ನನಗೆ ಪ್ರಿಯರಾಗಿದ್ದವರು. ಈಗ ಕನ್ನಡದ ಸುಕವಿಗಳಾಗಿ ನನಗೆ ಆತ್ಮೀಯರಾಗಿದ್ದಾರೆ. ಸ್ತೋತ್ರಾರ್ಹರಾಗಿದ್ದಾರೆ, ಪ್ರೋತ್ಸಾಹಾರ್ಹರಾಗಿದ್ದಾರೆ. ಶ್ರೀಯುತರ ಯಾವ ಕವನದ ಕಡೆಗೆ ಕಿವಿ ಮಾಲಿದರೂ ಸಾಕು, ಇವರದು ಕವಿಮನೋಧರ್ಮವೆಂಬುದು ಒಡನೆಯೇ ತಿಳಿಯುತ್ತದೆ. ದಯಾಸಾಗರನಾದ ಉಪಗುಪ್ತ ಬೌದ್ಧನ ದೇವಶಾಂತಿಯ ಪ್ರಭಾವಕ್ಕೆ ಒಳಗಾಗಿ ಬೆಳಕು ಕಂಡುಕೊಂಡ ವೇಶ್ಯೆಯೊಬ್ಬಳ ಪ್ರಸಂಗವನ್ನು ವರ್ಣಿಸುವ 264 ಸಾಲುಗಳ ಅರುವತ್ತಾರು ಪದ್ಯಗಳ ಕಥನಕವನವಾದರೂ ಸರಿಯೆ, ಒಂದೋ, ಎರಡೋ ಸಾಲಿನ ಚಿತ್ತ–ಚಿತ್ರಣವಾದರೂ ಸರಿಯೆ – ಇವನ್ನು ಕವಿಯಲ್ಲದೆ ಹೀಗೆ ಬೇರೊಬ್ಬನು ಹೇಳಲಾರ ಎನ್ನಿಸುತ್ತದೆ.

ಮಾರಿಕೊಂಡ ಮೈಯಪ್ಪುತ್ತಿದ್ದ ಕೈ. ಸೆಳೆಯುತಿದ್ದ ಕಣ್ಣು.
ಸವಿಯನಿತ್ತ ತುಟಿ. ಮೆರುಗನಿತ್ತ ಕಟಿ– ಎಲ್ಲ ಕೊಳೆತ ಹಣ್ಣು!
ಬಳ್ಳಿಯರಳುಗಳ ಕಂಪನಿತ್ತವನವಿಂದು ಬರಿದು ಬಂಜೆ!
ಮುಳ್ಳು ಕಳ್ಳು ಬಳೆದಿರಲು ಬಾಳಿಗಿಳಿದಿತ್ತು ಕವಿದ ಸಂಜೆ!

ಎಂದು ಪರಿತ್ಯಕ್ತಳಾದ ವೃದ್ಧವೇಶ್ಯೆಯ ಚಿತ್ರವನ್ನು 'ಕೊಡುವಲ್ಲಿ ಕಾಣಬರುವ ಕವಿಯ ಸಾಮರ್ಥ್ಯವೇ.

"ಇರುಳಮೌನದ ಚೀಲ ಹರಿದು ಸದ್ದು ಸುರಿದಂತೆ ಕೋಳಿ ಕೂಗಿತು" ಎಂಬ ಪುಟ್ಟ ಒಂದು ಸಾಲಿನ ಕವಿತೆಯಲ್ಲಿಯೂ ಕಾಣಬರುತ್ತದೆ. ಮುಗಿಲು "ಬಾನತುರುಬಿನ ಕಣಗಿಲೆ"ಯಾಗಿ ಯಾರ ಕಣ್ಣಿಗೆ ಕಾಣುತ್ತದೆಯೋ, ಕೋಳಿಯ ಕೂಗು "ನಿಶೆಯ ನಿಲ್ದಾಣದಲಿ ನಿಂತ ಬದುಕಿನ ಬಂಡಿಗೆ ಮುನ್ನಡೆಯ ಸಂಜ್ಞೆ"ಯಾಗಿ ಯಾರ ಕಿವಿಗೆ ಕೇಳಿಸುವುದೋ – ಆತ ಕವಿಯಲ್ಲದಿದ್ದರೆ ಮತ್ತೆ ಯಾರು ಕವಿಯೋ ನಾ ಅರಿಯೆ.

ರಾಗಲೋಲೆ ಆನಂದಿ ಉಪಗುಪ್ತನ ದೇಹಸೌಂದರ್ಯಕ್ಕೆ ಮಾರುಹೋದ ಸಂದರ್ಭದಲ್ಲಿ ಆ ಹೆಣ್ಣಿನ ಬಗೆಯ ಹುಚ್ಚು ಎಷ್ಟು ಸೊಗಸಾಗಿ ಒಂದೇ ಒಂದು ಸಾಲಿನಲ್ಲಿ ಕನ್ನಡಿಸಿದೆ ನೋಡಿ:
'ಕಾಮಿಸಿತ್ತು ಹೆಣ್ಮನವು ಯೋಗಿಯನು ಹಗಲ ಬಯಸಿತಿರುಳು'
'ಹಗಲಬಯಸಿತಿರುಳು' ಎನ್ನುವುದು ಬಹ್ವರ್ಥಗರ್ಭಿತವಾದ ಮಾತೇ ಸರಿ.

ಯತಿ ಹಗಲು, ವೇಶ್ಯೆ ಇರುಳು 'ದ್ಯುಮಣಿಯಲ್ಲಮ ಸಿಕ್ಕದಾದನು ತಮದ ಮಾಯೆಗೆ' ಎಂಬ ಚಾಮರಸೋಕ್ತಿಯ ಎತ್ತರಕ್ಕೆ ಏರುತ್ತದೆ ಈ ಕವಿಯ ಮಾತು.

ಇದೇ ಕಥನ ಕವನದ ಇಪ್ಪತ್ನಾಲ್ಕನೆಯ ಪದ್ಯ ಅದ್ಭುತವಾಗಿದೆ.

'ಎದೆಯ ಕಣಿವೆಯಲಿ ಮದನ ನಿರ್ಝರಿಣಿ! ಪಡೆಯದಾಗಿ ಗತಿಯ'

ಎಂಬ ಮಾತು ಆ ವೇಶ್ಯೆಯ ಉಬ್ಬೆಗವನ್ನು ಹೇಗೆ ಕನ್ನಡಿಸಿದೆ ನೋಡಿ!

'ಸೃಷ್ಟಿ–ದೃಷ್ಟಿ' ಎಂಬ ಕವನದಲ್ಲಿ ಜೀವನ–ಕಲೆ ಇವುಗಳ ಪರಸ್ಪರ ಸಂಬಂಧವನ್ನು ಕುರಿತ ಒಂದು ವ್ಯಾಖ್ಯಾನ ನಮಗೆ ದೊರೆಯುತ್ತದೆ.

'ಸೋದಾಹರಣವಾಗಿ– ಈ ಕವನದ ಕೊನೆಯ ಪದ್ಯದ ಕೊನೆಯ ಎರಡು ಸಾಲುಗಳು ಹೀಗಿವೆ:
"ಕಲೆಯ ಸ್ಪರ್ಶದಿ ನೋವು ನಲಿವ ಸೆಲೆಯಾಗುತಿದೆ–
ಭೀತಿದರ್ಶನ ಸರಸವೆನಿಸುವಂತೆ'

ಬಹುಶಃ ಈ ಕೊನೆಯ ಪದ್ಯದ ಮೊದಲೆರಡು ಸಾಲುಗಳನ್ನೂ ಹೇಳಬೇಕೋ ಏನೋ ಅರ್ಥಪುಷ್ಟಿಗೆ!

'ಮನದ ಕಣ್ಕಂಡಂತೆ ಕಲೆಯು ನೆಲೆಗಾಣುತಿದೆ..

–ಹಕ್ಕಿ ಮೊಗದಲಿ ಭಯದ ಭಾವದಂತೆ'–

ಇಲ್ಲಿ ಬರುವ 'ಭೀತಿದರ್ಶನ' 'ಹಕ್ಕಿ' – ಇವುಗಳ ವಿವರಕ್ಕೆ ಪಂಕ್ತಿ ಬರುವ ಸಂದರ್ಭ ಸನ್ನಿವೇಶಗಳ ನಿರೂಪಣೆಗೇ ಶರಣು ಹೋಗಬೇಕು.

'ಏನೇ ಆದರೂ' ಒಂದು ಉತ್ತಮ ಕವನ. ನಮ್ಮ ನಿಜದ ಮನೆ ಬೇರೆ. ಇಲ್ಲಿ ಈಗ ನಾವು ಇರುವ ಈ ಲೋಕವೇ ಬಾಡಿಗೆಯದು ಎನ್ನುವ ಭಾವ ಸ್ವಾರಸ್ಯಪೂರ್ಣವಾಗಿದೆ ಮಾತ್ರವಲ್ಲ ಬಹುಗೂಢಾರ್ಥಗರ್ಭಿತವಾದುದು. ಈ ಬಾಡಿಗೆ ಮನೆ ಎಷ್ಟು ಸೊಗಸಾಗಿದೆ! ಇದೆಲ್ಲ ಭಗವಂತನ ಕೃಪೆ. ಇಲ್ಲಿ ಒಂದು ದಿನವೂ ದೀಪ ಆರಿಲ್ಲ (ದೀಪ ಎಂದರೆ ಸೂರ್ಯ!) ಅವನು ಎಂದಾದರೂ ಹಗಲುನಿದ್ದೆಗೈದನೇ? ನಕ್ಕುನಗಿಸುವ ಚಂದಮಾಮನ ಸೊಗಸು ಕಡಿಮೆಯೇ? ಆ ಗಾಳಿಯೋ! "ಬಾಗಿಲಬಳಿ ಬೆಲೆ ಕೇಳಿ ಮುಷ್ಕರತಾಳಿ ಮೂಗು ಕಟ್ಟಿಲ್ಲ" ಇಲ್ಲಿ ಬೆಂಕಿ ಅತ್ತಿಲ್ಲ. 'ಮನೆಯ ಮಾಡಿನ ಹೊದಿಕೆಯ ಬಣ್ಣ ಮಾಸಿಲ್ಲ. (ಎಂದರೆ ಆಕಾಶದ ಚೆಲುವು ಬಣ್ಣಗುಂದಿಲ್ಲ!).. ನೀಲತೊಟ್ಟಿಯಲಿ ತೊಟ್ಟು ನೀರೂ ಆರಿಲ್ಲ. (ಎಂದರೆ

ಸಮುದ್ರ ಸರ್ವಸಮೃದ್ಧವಾಗಿದೆ ಎಂದರ್ಥ!).. ಇತ್ಯಾದಿ ಭಾವದಲ್ಲಿ ಈ ಬಾಡಿಗೆ ಮನೆಯ ವಾಸ ಕವಿಗೆ ಹಿತವೆನಿಸುತ್ತದೆ. ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳ ಕುರಿತ ಈ ಕಲ್ಪನೆ ನವ್ಯಕ್ಕೆ ನವ್ಯ!

"ಬೆಕ್ಕು" ಎನ್ನುವ ಕವಿತೆ ನಿಜಕ್ಕೂ ಮನೆಗೆ ಆಗಂತುಕಳಾಗಿ ಸೇರಿಕೊಂಡ ಹೆಣ್ಣುಬೆಕ್ಕೊಂದರ ವರ್ಣನೆಯೇ ಸರಿ. ಆದರೆ ಆ ಬೆಕ್ಕು ನಮಗೆ ಅರಿವಿಲ್ಲದೆಯೇ ಬಂದು ಮನದ ಮನೆಯಲ್ಲಿ ನಾವು ಕರೆದ ಹಾಲು, ನಾವು ಹೆಪ್ಪಿಟ್ಟ ಮೊಸರು ಕುಡಿದು ದಾಂಧಲೆ ನಡೆಸುವ "ಪರಕೀಯ ಪ್ರಜ್ಞೆ"ಯ ಪ್ರತೀಕ ಎನ್ನಿಸಿದಾಗ ಈ ಕವಿಯ ಚಿತ್ರಭೆಯ ತಟಿಲ್ಲತೆಯ ಬೆಳಕಿನ ಚುಚ್ಚುಕಾಂತಿಯಿಂದ ನಮ್ಮ ಹೃದಯದ ಕುಹರ ದೀಪ್ತವಾಗುತ್ತದೆ. ಕ್ಷಣಮಾತ್ರದಲ್ಲಿ ನಮ್ಮ ಮೂಗು, ನಾಲಗೆ, ಕಿವಿ, ತೊಗಲು, ಕಣ್ಣು ಈ ಪಂಚೇಂದ್ರಿಯಗಳ ಮೂಲಕ ಮನಸ್ಸಿಗೆ ಜುಗುಪ್ಸೆಯಾಗುವಂತಹ ರೀತಿಯಲ್ಲಿ ಪರಕೀಯ ಪ್ರಜ್ಞೆ 'ಸ್ವತ್ವ'ವನ್ನೂ ಮೂಲೆಗುಂಪಾಗಿಸಿ ಬೆಳೆಯುತ್ತದೆ ಎಂಬ ತತ್ವ ಈ ಮಾರ್ಜಾಲ ಪ್ರತಿಮೆಯಲ್ಲಿ ಅಭಿವ್ಯಕ್ತಿಯನ್ನು ಪಡೆದ ರೀತಿ ನವೀನಕ್ಕೂ ನವೀನವೇ ಸರಿ.

'ಗುರು-ಶುಕ್ರ' ಇಂದಿನ ಅಧ್ಯಾಪಕ ವೃತ್ತಿಯ ಕಷ್ಟಕಾರ್ಪಣ್ಯಗಳನ್ನು ಹೃದಯಂಗಮವಾಗಿ ಚಿತ್ರಿಸುವ ನವೀನಪ್ರಜ್ಞೆ ಕವನ. ದೇವರಂತಹ ಶಿಷ್ಯರಿಗೆ 'ಗುರು'ವಾಗಿ ಒಮ್ಮೆ ಮೆರೆದವನು ದೈತ್ಯರಂತಹ ಶಿಷ್ಯರಿಗೆ ಈಗ 'ಶುಕ್ರ'ನಾಗಿ ಒಂದು ಕಣ್ಣು ಕಳೆದುಕೊಳ್ಳುವ (ಶಿಷ್ಯರಿಗೆ ಉಪಕಾರ ಮಾಡಿದ ಫಲದ ಪರಿಣಾಮವಾಗಿ!) ದೌರ್ಭಾಗ್ಯಕ್ಕೆ ಗುರಿಯಾದನೇ ಈ ಅಧ್ಯಾಪಕ? – ಎಂಬ ವಿಚಾರ ಇಲ್ಲಿ ಮೂಡಿದೆ.

'ಹೊದಿಕೆಯೊಳಗೆ' – ಸ್ವಬಂಧನದ ಇತಿಮಿತಿಗಳ ದೆಸೆಯಿಂದ ಚಿತ್ರಹಿಂಸೆಗೆ ಗುರಿಯಾದ ಜೀವಿಯ ಚಿತ್ರವಿಶೇಷ.

'ಕಾಯುತಿದ್ದೇವೆ' – ಎನ್ನುವ ಕವನದಲ್ಲಿ ಬರುವ ದ್ವಂದ್ವಾರ್ಥದ ಮೋಡಿ ರಮ್ಯವಾಗಿದೆ.

"ಬೀದಿಬೀದಿಯಲಿ ಹೆಣಕಾದಂತೆ ಬರಿ ಬಿಸಿಲಲ್ಲಿ
ಬರಲೊಲ್ಲದ ನಾಯಕನಿಗಾಗಿ ಕಾಯುತಿದ್ದೇವೆ
ಕಟ್ಟಿದ ಆಸ್ಪತ್ರೆ ಶಾಲೆಗಳ ಹೊರನಿಂತು–
ಕದತೆರೆಯೆ ಮಂತ್ರಿಗಳಿಗಾಗಿ ಕಾಯುತಿದ್ದೇವೆ"

ಈ ಪದ್ಯದ ಅಣಕ, ಅದರ ಮೊನೆ ಯಾವ ಯೋಧನ ಕೈಯ ಯಾ ಭಲ್ಲೆಗೆ, ಯಾವ ಅಸಿಗೆ ಇದ್ದೀತು?

'ನಿಮಿಷದ ಕಾಲ್ನಡೆಗಾಗಿ ಗಂಟೆಗಟ್ಟಲೆ ಬಸ್ಸು ಕಾಯುತ್ತಿದ್ದೇವೆ'

'ಹಲವೊಮ್ಮೆ ಕುಳಿತು ನಿದ್ದೆಗಾಗಿ ಕಾಯುತ್ತಿದ್ದೇವೆ'

'ನಿಲ್ದಾಣದಲ್ಲಿ ಕಾದು ಬಂಡಿಸಾಗಿದ ಮೇಲೆ ಎಚ್ಚರಾಗಿ
ನಾವೇಕೆ ತೆರಳಲಿಲ್ಲ ಎಂದು ಬೆಚ್ಚಿಬೀಳುತ್ತಿದ್ದೇವೆ!'

ಹೀಗೆ ಹೇಳಿದ ಕವಿ ಕೊನೆಗೆ ಈ ಕವನವನ್ನು ಮುಗಿಸುವುದು ಹೀಗೆ:

'ನಾವೆಲ್ಲ ನಾಡ ಕಾಯುತ್ತಿದ್ದೇವೆ'

ಈ ಕೊನೆಯ ಚರಣದ ಶ್ಲೇಷೆ ನಮ್ಮ ನಮ್ಮ ಮನಗಳನ್ನು ವಿಶ್ಲೇಷಿಸುವುದರ ಕಡೆಗೆ ನಮ್ಮ ಗಮನವನ್ನು ಸೆಳೆಯುವುದಿಲ್ಲವೆ?

'ಕಾಣದ ಕಣ್ಣು' ಕವನ ನಿಜವಾದ ಪ್ರೇಮವನ್ನೂ, ಸೌಂದರ್ಯವನ್ನೂ ನೋಡುವುದು ಒಳಗಣ್ಣಿನಿಂದ ಎಂಬ ಅರಿವನ್ನು ಮೂಡಿಸುತ್ತದೆ. ವಿಧಿವಶದಿಂದ ಹೊರಗಣ್ಣು ಮುಚ್ಚಿಹೋದಾಗ ಒಳಗಣ್ಣು ಬಿಚ್ಚಿ, ತನ್ನ ಸತಿಯ ಸೇವೆ, ಪ್ರೀತಿ, ಸ್ನೇಹಗಳಿಗೆ ಮಾರುಹೋದಾಗ ಪ್ರತಿಯೊಬ್ಬನೂ ಅರಿಯುವ ಆತ್ಮಸೌಂದರ್ಯ, ಶೀಲ ಸೌಂದರ್ಯಗಳಲ್ಲಿಯೇ ಪ್ರೇಮತತ್ವದ ಸಾಕ್ಷಾತ್ಕಾರ. ಆತನಿಗಾದ ಸಂಗತಿಯ ಚಿತ್ರ ಇಲ್ಲಿದೆ.

ದೇಶಸೇವೆಯ ಸೋಗಿನಲ್ಲಿ ರಾಜಕೀಯ ಕ್ಷೇತ್ರದಲ್ಲಿ ದುಡಿಯುತ್ತಿರುವ (?) ಸ್ವಾರ್ಥಸಾಧಕರನ್ನು ಬೆರಳು ಮಾಡಿ ತೋರುವ 'ಇವರು' ಎಂಬ ಪದ್ಯ

ಸೊಗಸಾಗಿದೆ. -

"ಕಾನೂನು ಕೋಟೆಯಲಿ ಕುಂಟುಪಂಕ್ತಿಯ ಒಳದಾರಿ ಕೊರೆದು

ಗೇರು ಬೀಜದಂತೆ ಹೊರಗುಳಿದ ನಿರ್ಲಿಪ್ತರಿವರು"

-ಎಂಬ ಇದರ ಆರಂಭವೇ ಸೊಗಸು. ಸಾಲಂಕೃತ ಭಾಷೆಯಲ್ಲಿ ಎಂತಹ ಧ್ವನಿರಮ್ಯತೆ ಹುದುಗಿದೆ ಎಂಬುದನ್ನು ಪರಿಭಾವಿಸಿಕೊಳ್ಳಿರಿ. ಇದರ ಕೊನೆ ಹೀಗೆ:

"ಇವರಿಂದ -

ತನ್ನ ಭಕ್ತರ ಅರಗಿನ ಮನೆಯಿಂದ ತಪ್ಪಿಸಿ

ಅನಾಥರು ಅಲ್ಲಿ ತಂಗಿದ್ದಾಗ

ಬೆಂಕಿಕೊಟ್ಟದ್ದು -

ಈ ಭಾರತದಲ್ಲಿ 'ಲಾಕ್ಷಾಗೃಹ ದಹನ'ದ ಹೊಸಹಳೆಯ ಕಥೆ".

ಲಾಕ್ಷಾಗೇಹದಾಹದ ಆ ಕಥೆಯನ್ನೂ ನೆನಪು ಮಾಡಿಕೊಟ್ಟು ಈ 'ಇವರು' ಬದುಕಿಕೊಂಡಿರುವ ಸಂಗತಿಯನ್ನು ಎಷ್ಟು ಸೂಚ್ಯವಾಗಿ ಚಿತ್ರಿಸಿದ್ದಾರೆ ಈ ಕವಿ!

ದೀಪಕ್ಕೆ ಹಾರಿದ ಮಿಡತೆ, ಮಿಡತೆಗೆ ಹಾರಿದ ಬೆಕ್ಕು - ಇವೆರಡರ ವ್ಯಾಪಾರಗಳನ್ನು ನೋಡಿದ ಕವಿಮನಸ್ಸು ಒಂದೊಂದು ಜೀವಿಯೂ ಭಗವಂತನ ಕಾರುಣ್ಯವನ್ನು ಹೇಗೆ ಹೇಗೆ ಪರಿಭಾವಿಸಿಕೊಳ್ಳಬಹುದೆಂಬುದರ ಚಿತ್ರ 'ದೇವ' ಎಂಬ ಕವನದ ವಸ್ತು.

'ನಿರುತ್ತರ'ವು ಪ್ರಸ್ತುತ ರಾಜಕೀಯದಲ್ಲಿ ತೊಡಗಿದ ದೇಶಸೇವಾಧುರೀಣನು ನಾವು ಕೇಳುವ ಪ್ರಶ್ನೆಗೆ ನಿರುತ್ತರನಾಗದೆ ಗತಿ ಇಲ್ಲವೆಂಬುದನ್ನು ಸೂಚಿಸುತ್ತದೆ.

ಪ್ರತಿಪದ್ಯವನ್ನೂ ಕುರಿತು ವಿವರಗಳನ್ನು ನೀಡುವುದು ನನ್ನ ಉದ್ದೇಶವಲ್ಲ. ಆ ಕೆಲಸಕ್ಕೆ ಇದು ಸ್ಥಳವೂ ಅಲ್ಲ. ಅವುಗಳನ್ನೆಲ್ಲ, ವಿಮರ್ಶಕರಿಗೆ, ರಸಿಕ ವಿದ್ವಜ್ಜನರಿಗೆ, ಮುಖ್ಯವಾಗಿ ಸಾನುಕ್ರೋಶಪರರಾದ, ನಿರ್ಮತ್ಸರರಾದ ಸಹೃದಯರಿಗೆ ಬಿಡುತ್ತೇನೆ.

ಈ ಕವನ ಸಂಕಲನಕ್ಕೆ ಕವಿ ಇಟ್ಟ ಹೆಸರು "ಮನನ". ಇಲ್ಲಿ 'ಮನನ'ವೆಂಬ ಹೆಸರಿನ ಕವಿತೆಯೇ ಸಂಕಲನದ ಹೆಬ್ಬಾಗಿಲಿನಲ್ಲಿದೆ. ಪ್ರತಿ ಕವನವೂ ಇಲ್ಲಿ ಮನನ ಯೋಗ್ಯವಾಗಿದೆ. ಯಾವ ಕವಿತೆಯೂ ಹಗುರವಾಗಿಲ್ಲ, ಅರ್ಥ ಗೌರವದಿಂದ ಬಾಗಿದೆ, ಇಂಬಾಗಿದೆ.

"ಶ್ರುತಿಯ ಸ್ಮೃತಿಯ ಉದ್ಗ್ರಂಥರಾಶಿ-ಸ್ಮೃತಿಗತಿಗೆ;-ಮನನಕಿಲ್ಲ

ಕಣ್ಣಿಗೊಂದು ಗಾಜಿರಿಸಿಕೊಂಡರೂ ಕುರುಡು ಕಳೆಯಲಿಲ್ಲ

ಮಾತು ಮೊರಗಳನ್ನು ಕೂಡಿ ಕೇರಿದರೂ ಕಾಳು ದೊರೆಯಲಿಲ್ಲ.

ದಂಡೆ ಹೂವುಗಳ ಹೇರಿಕೊಂಡರೂ- ಕಂಪು ಹರಡಲಿಲ್ಲ-

ಎಂದು ಕವಿ ತಮ್ಮ ಒಂದು ಕವನದಲ್ಲಿ ಸಾಹಸ ಮೂಡಿಯೂ ಸಫಲರಾಗದ, ಸಾಧನೋಪಕರಣಗಳಿದ್ದೂ ಸಿದ್ಧಿಕಾಣದ ಚೇತನಗಳನ್ನು ಕುರಿತು ಮರುಗಿದ್ದಾರೆ. ಈ ಅಸಾಫಲ್ಯ, ಅಸಿದ್ಧಿಗಳಿಗೆ ನಮ್ಮ ಓದು, ನಮ್ಮ ಬರಹ, ನಮ್ಮ ನಡೆ, ನಮ್ಮ ನುಡಿ - ಇವುಗಳ ಬಗ್ಗೆ ನಮಗೆ ಮನನ ಸಾಲದು ಎಂಬುದೇ ಕವಿಯ ಕೊರಗು. ಮನನದ ಕಡೆಗೆ ಗಮನವಿಡಿ ಎಂದು ನಮನಪೂರ್ವಕವಾಗಿ ಈ ಕವಿ ವಿನಂತಿಸಿದ್ದಾರೆ- 'ಮನನ'ದ ಪುಟಪುಟದಲ್ಲಿ! ಅವರ ವಿನಂತಿಗೆ ಓಗೊಡುವುದು ನಮ್ಮ ಆದ್ಯ ಕರ್ತವ್ಯ. ಪಂಪನನ್ನು ಕುರಿತು, ಗಾಂಧಿಯನ್ನು ಕುರಿತು ಮನನಗೈಯೋಣ, 'ಪ್ರಶ್ನೆ'ಯಲ್ಲಿ ಅಡಗಿರುವ ಕವಿಸಮಯವನ್ನು ಕುರಿತು ಮನನಗೈಯೋಣ; 'ನಿನ್ನ ಕತ್ತಲ ಕೋಣೆ ಸಾಲು ಚೀಲಗಳಲ್ಲಿ ತುಂಬಿಹುದು ಸಿಡಿಮದ್ದು-ಹಿಗ್ಗಬೇಡ' ಎಂಬ ಕ್ಯೂಸರ್ಪಾಭಿಧಾನದ ಕವನದ ಚರಣಗಳು ಹೆಡೆಬಿಚ್ಚುವ ವಿಶೇಷಾರ್ಥಗಳ ಬಗ್ಗೆ ಮನನ ಮಾಡೋಣ; 'ರಾಷ್ಟ್ರಭಂಡಾರವನು

ತನ್ನವರ ಹಿತಕೆಂದು ಲೂಟಿಮಾಡಿದ ಧಾಳಿಕೋರನಾರು?' ಎಂಬ ಪ್ರಶ್ನೆಗೆ ನಿರುತ್ತರನಾಗಿ ನಿಂತ ರಾಜಕೀಯ ರಂಗದ ಉತ್ತರಕುಮಾರನನ್ನು ಕುರಿತು ಮನನ ಮಾಡೋಣ; 'ಗಡಿಯಾರ'ವೆಂಬ ಕವನ (ಇದೊಂದು ಅದ್ಭುತವಾದ ಕವನ)ದಲ್ಲಿ ಕೊನೆಗೆ ಬರುವ "ಕಾಲಕವಿ ರಚಿತ ಧ್ವನಿಪೂರ್ಣ ಕಾವ್ಯ' ಎಂಬ ನಿನ್ನ ಹೆಗ್ಗಳಿಕೆ ಧ್ವನಿಶೂನ್ಯ ಚಿತ್ರಚಮತ್ಕಾರಭೂಷಣವಾಗಿ ಸವೆದ ಕವಿಸಮಯವಾಯ್ತು- ಸಮಯ!" ಎಂಬ ಸಾಲುಗಳ ವ್ಯಂಗ್ಯಾರ್ಥದ ವಿವರಗಳನ್ನು ಕುರಿತು ಮನನ ಮಾಡೋಣ. ಒಂದು ಗಡಿಯಾರ ಅದರ ಆಕಾರ, ಗಾತ್ರ, ಶಬ್ದ, ಇತ್ಯಾದಿಗಳ ವೈವಿಧ್ಯದಿಂದ ಅದು ಯಾವ ಯಾವ 'ಧ್ವನ್ಯರ್ಥ'ಗಳಿಗೆ ಮಾಧ್ಯಮವಾಗಬಲ್ಲದು ಎಂಬುದರ ಕುರಿತು ಮನನ ಮಾಡೋಣ.

ನನ್ನ "ಮುನ್ನುಡಿ"ಯ ಮಾತು ಕೆಲವರಿಗೆ ಹೆಚ್ಚು ಎನ್ನಿಸೀತು. ಆದರೆ ನನಗೆ ಇಲ್ಲಿ ಹೇಳಿರುವ ಮಾತುಗಳು ಈ ಕವಿಯ ವಿಷಯದಲ್ಲಿ ನನಗಿರುವ ಪ್ರೀತಿ, ವಿಶ್ವಾಸಗಳ ಅಭಿವ್ಯಕ್ತಿಗೆ ತೀರ ಕಡಿಮೆಯಾದವು ಎಂದು ಅನ್ನಿಸಿದೆ. ಹೀಗೆಂದಾಗ ನೀವು ನನ್ನನ್ನು ನಂಬಬೇಕು. ಒಬ್ಬರ ವಿಷಯದಲ್ಲಿ ಒಬ್ಬರಿಗೆ ನಂಬಿಕೆ, ಗೌರವ, ವಿಶ್ವಾಸಗಳು ಸಾಹಿತ್ಯ ಕ್ಷೇತ್ರದಲ್ಲಿಯೂ ಕಡಿಮೆಯಾಗುತ್ತಿದೆಯೋ ಎನ್ನುವ ಸಂದೇಹವನ್ನೂ ಮೂಡಿಸುವಂತಹ ದಿನಗಳು ಇವು. ಈ ಕುರಿತೂ ಮನನ ಮಾಡಬೇಕಾಗಿದೆ ನಾವು.

ದೊಡ್ಡದನ್ನು ಬಯಸುವವರು, ದೊಡ್ಡದಾಗಿ ಬೆಳೆಯುವವರು ದೊಡ್ಡ ದಾರಿಯಲ್ಲಿ ಹೋಗಬೇಕು. ಯಾವುದು ಆ ದೊಡ್ಡ ದಾರಿ? "ಪೂರ್ವೈರಯ-ಮಭಿಪ್ರೇತೋ ಗತೋ ಮಾರ್ಗೋನುಗಮ್ಯತೇ" ಎಂದು ಹಿಂದಿನವರು ತಮ್ಮ ಆ ಹಿಂದಿನವರು ಹೋದದಾರಿಯಲ್ಲಿ ಹೋದರಲ್ಲವೆ? ಅದೇ ಶಿವಪಥ. ಅದೇ ಕವಿಪಥವೂ. ಆ ಪಥದಲ್ಲಿ ಶತಪಥ ಸುತ್ತುವ ನನ್ನನ್ನು ನಿಲ್ಲಿಸಿ ಶ್ರೀ ಸೀ. ಹೊಸಬೆಟ್ಟು ನಮನಗೈದು ತಮ್ಮ "ಮನನ"ವನ್ನು ಇತ್ತರು, ಓದಿ ನೋಡಿ ಎಂದರು, ಮುನ್ನುಡಿ ಬರೆಯಿರಿ ಎಂದರು.

ಹೀಗಾಗಿ ಮೇಲೆ ನನಗೆ ತಿಳಿದಂತೆ ನಾಲ್ಕು ಮಾತು ಬರೆದಿದ್ದೇನೆ. ಇದಕ್ಕೆ ಪೂರಕವಾಗಿ ಇನ್ನೂ ನಾಲ್ಕು ಮಾತು ಸೇರಿಸಲಿ ಇದನ್ನು ಓದಿ ಮನನ ಮಾಡಿದ ಹಿರಿಯರು ಎಂಬ ಆಸೆಯಿಂದ.

ಶ್ರೀ ಸೀ. ಹೊಸಬೆಟ್ಟು ಅವರು ಬಹಳಕಾಲ ಅಧ್ಯಾಪಕ ವೃತ್ತಿಯಲ್ಲಿದ್ದವರು ಈಗಲೂ ಅದನ್ನೇ ನಂಬಿಕೊಂಡವರು. ಅವರು ಬೇರೆ ಬೇರೆ ಸಾಹಿತ್ಯಪ್ರಕಾರಗಳಲ್ಲಿ ಕೃತಿರಚನೆಗೈದಿದ್ದಾರೆ ವಿಪುಳಪ್ರಮಾಣದಲ್ಲಿ ಎಂದು ಕೇಳಿದ್ದೇನೆ. ಆ ಕೃತಿಗಳೆಲ್ಲವೂ ಬೇಗನೆ ಬೆಳಕು ಕಾಣಲಿ ಎಂದು ಆಶಿಸುತ್ತೇನೆ.

ಈ ಚೊಚ್ಚಲು ಪ್ರಕಟಣೆ ಅಂತಹ ಆಸೆಯನ್ನು ನನ್ನಂತಹರ[illegible] ಮೂಡಿಸುತ್ತದೆ. ಕವಿಗೆ ತನ್ನ ಕೃತಿಯಿಂದ ಒದಗುವುದು "ಸದ್ಯಃಪ[illegible] ನಿರ್ವೃತಿ" ಸರಿಯೆ. ಇದರ ಜತೆಗೆ ಕೀರ್ತಿಯೂ ಬರುತ್ತದೆ ಅದೂ ಸರಿ[illegible] ಇವೆರಡರ ಜತೆಗೆ ಅರ್ಥಸಂಪಾದನೆಯೂ ಆಗಬೇಕು. ಹಾಗಾಗುವ[illegible] ನಾವು ನೋಡಿಕೊಳ್ಳಬೇಕು. ಅದರಿಂದ ನಮಗೇ ಲಾಭ ಎಂದು ಹೇ[illegible] ಈ "ಮನನ"ವೆಂಬ ಕೃತಿಯನ್ನೂ ಇದರ ಕರ್ತೃವನ್ನೂ ಹೃತ್ಪೂರ್ವಕವಾ[illegible] ಅಭಿನಂದಿಸಿ, ಈ ಕೃತಿಗೂ, ಈ ಕವಿಗೂ ಅತ್ಯಪೂರ್ವವಾದ ಪ್ರೋತ್ಸಾಹವ[illegible] ಕನ್ನಡ ಜನತೆ ನೀಡಲಿ ಎಂದು ಹಾರೈಸಿ ನನ್ನ ಕೈಯ ಲೇಕ್ಕಣಿಯ[illegible] ಕೆಳಗಿಡುತ್ತೇನೆ.

ಎಸ್.ವಿ.ಪರಮೇಶ್ವ[illegible]
ಕನ್ನಡ [illegible]

6–12–1970
ಮಂಗಳಗಂಗೋತ್ರಿ ಸ್ನಾತಕೋತ್ತರ ಕೇಂದ್ರ
ಮಂಗಳೂರು.

ಓದುಗರೊಡನೆ

ನನ್ನ ಬರವಣಿಗೆಯ ಇತಿಮಿತಿಗಳ ಬಗ್ಗೆ ಸಹೃದಯರ ಅಭಿಮತವೇನೆಂದರಿತು, ನನ್ನನ್ನು ನಾನೇ ಸಾಧ್ಯವಾದಷ್ಟು ತುಂಬಿಕೊಳ್ಳುವ, ತಿದ್ದಿಕೊಳ್ಳುವ ಲವಲವಿಕೆ ನನ್ನಲ್ಲಿದೆ. ಹೀಗಾಗಿ ನನ್ನದಿದು ಪ್ರಕಟವಾಗುತ್ತಿರುವ ಮೊದಲ ಕವನ ಸಂಕಲನವೇ ಆದರೂ, ಚೊಚ್ಚಲ ಕೃತಿಯೆಂಬ ಕಾರಣಕ್ಕಾಗಿ ರಿಯಾಯತಿಯ, ದಾಕ್ಷಿಣ್ಯದ ಸಹಾನುಭೂತಿಯನ್ನು ಮಾತ್ರವೇ ನಾನು ನಿರೀಕ್ಷಿಸುತ್ತಿಲ್ಲವೆಂದು ನಾನು ಪ್ರಾಮಾಣಿಕವಾಗಿ ನಿವೇದಿಸಿಕೊಳ್ಳುತ್ತಿದ್ದೇನೆ. ನನ್ನ ಈ 'ಸ್ವಾರ್ಥ'ಕ್ಕೆ ಓದುಗರು, ವಿಮರ್ಶಕರು ನೆರವಾಗಬೇಕೆನ್ನುವುದು ನನ್ನ ಆಶಯ.

ಕನ್ನಡ ಹಿರಿಯರಲ್ಲೊಬ್ಬರೂ, ಸರಸತೆ, ಸೌಜನ್ಯಗಳಿಗೆ ಇನ್ನೊಂದು ಹೆಸರೂ ಆಗಿರುವ ಪ್ರಾಧ್ಯಾಪಕ ಕವಿ ಶ್ರೀ ಎಸ್. ವಿ. ಪರಮೇಶ್ವರ ಭಟ್, ಎಂ.ಎ. ಇವರು ನನ್ನ ಬರಹಗಳನ್ನೋದಿ ಸಂಪೂರ್ಣ ಗುಣಗ್ರಾಹಿಗಳೇ ಆಗಿ, ಮೆಚ್ಚುಗೆಯ ಮಾತುಗಳನ್ನಾಡಿ – ಮುನ್ನುಡಿಯ ಮೂಲಕ ನನ್ನನ್ನು ಹರಸಿದ್ದಾರೆ; ತಮ್ಮ ಸರಸ ಸಜ್ಜನಿಕೆಯನ್ನೆ ಮೆರೆದಿದ್ದಾರೆ. ಅವರಿಗೆ ನನ್ನ ಅನಂತ ಪ್ರಣಾಮಗಳು.

ಯುಗಪುರುಷ ಪ್ರಕಟಣಾಲಯದ ಸಾಹಸೀ ಸಂಪಾದಕರಾದ ಶ್ರೀ ಕೆ. ಅನಂತ ಪದ್ಮನಾಭ ಉಡುಪರ ಪ್ರೇರಣೆ, ಪ್ರೋತ್ಸಾಹ, ಸಹಕಾರಗಳಿಲ್ಲದೆ ಇದ್ದರೆ 'ಮನನ' ಅಚ್ಚಾಗುತ್ತಿರಲಿಲ್ಲ. ಅವರಿಗೆ ನಾನು ಋಣಿಯಾಗಿಯೇ ಉಳಿಯಬೇಕಾಗಿದೆ.

ನನ್ನ ಬರವಣಿಗೆಗಳನ್ನು ಪ್ರಕಟಿಸಿದ ಪತ್ರಿಕೆಗಳಿಗೂ, ಅವುಗಳನ್ನು ಓದಿ ಬೆನ್ನು ತಟ್ಟಿದ ಗುರು–ಮಿತ್ರವೃಂದಕ್ಕೂ ನನ್ನ ಕೃತಜ್ಞತೆಯ ವಂದನೆಗಳು.

ಸೀ. ಹೊಸಬೆಟ್ಟು
ಸುರತ್ಕಲ್, ದ.ಕ.

7–12–1970

ಮನನ

ಮನದ ಕಗ್ಗವಿಯಲ್ಲಿ ಮಿನುಗುತಿದೆ ಹಿರಿಯಾಸೆ:
ಮನನಕ್ಕೆ ಮನವೆಲ್ಲ ಮುಡಿಪು ಮಾಡಿ,
ಚಿಂತನದ ತೊರೆನೀರ ಸಾಧನೆಯ ನಾಲೆಯಲಿ
ಹರಿಸುತಾಕಾಂಕ್ಷೆಯನು ಬಿತ್ತಿ, ಹೂಡಿ,
ನಿತ್ಯನೂತನ ಭಾವಸೌಂದರ್ಯ ರವಿಯಾಗಿ
ದೇವನೊಲು ಚೇತನವ ತುಂಬುತಿರಲು
ಹೃದಯಕ್ಷೇತ್ರವೆ ಹಿಗ್ಗಿ, ನೆಲವೆಲ್ಲ ಹೊಲವಾಗಿ
ಉದ್ಧಾರವೆನಿಸದೇ ಬರಡು ಬಾಳು!

ರಸನಿಮಿಷ

ಸ್ವಪ್ನ-ಸುಧೆಯ ಮೇಲೆ ಜೀವ ಹಂಸೆಯಾಗಿ ಈಸಿದೆ!
ಬಾಳ ಹೊಳೆಯ ಕೆಸರು ಕೊಳೆಯನೊಮ್ಮೆ ತಾನು ಮರೆತಿದೆ!
ಮನದ ಮೊಗ್ಗೆ ಬಾಡಿ ಕುಗ್ಗೆ- ಸವಿಯ ನೆರಳ ಹಬ್ಬಿಸಿ,
ಚಿಂತೆ ಮುಳ್ಳು ಚುಚ್ಚುತಿರಲು, ಪ್ರೇಮಪುಷ್ಪ ಚುಂಬಿಸಿ,
ನೋವು-ಸಾವು ಕವಿಯುತಿರಲು ಸ್ನೇಹ ಕಿರಣ ಹರಡಿಸಿ
ಕುರುಡು ದಾರಿ ಕಾಣದಿರಲು ದಿವ್ಯ ದೀಪ ಬೆಳಗಿಸಿ. -
ತಾಪ ಹೆಡೆಯನೆತ್ತೆ ಶಾಂತಿ ಗರುಡರೇಖೆ ತೋರಿಸಿ,
ಬಾಳಕಣದ ಭೀತ ಮನಕೆ ಕೃಷ್ಣಗೀತ ಹಾಡಿಸಿ
ಹೃದಯ ಹೇಮ ಕುಂಭದಲ್ಲಿ ಭಾವಗಂಧ ತುಂಬಿಸಿ
ಬದುಕ ಬನದ ಮಣ್ಣ ಹುಡಿಗೆ ಶ್ರೀ ಸುಗಂಧ ಚಿಮ್ಮಿಸಿ. -
ಬಳ್ಳಿ ಮಿಂಚು ಬೆಳಕಿನಿಂದ ಭವದಿ ಬುದ್ಧನಾಗಿಹೆ!
ಬಗೆಯ ಪಟದಿ ಕ್ಷಣದಿ ವಿಶ್ವಭಾವ-ಚಿತ್ರ ಹೇರಿಹೆ!

ದಿವ್ಯ ರಸಿಕ

ಕೊಳದೆದೆಯ ನಗುವಾಗಿ ಅರಳಿರಲು ಅರವಿಂದ
ಮನದುಂಬಿ, ದಳದುಂಬಿ– ತುಂಬಿ ನೀನು!
ನೀಲಗಗನದ ಬಣ್ಣ, ಮುಗಿಲ ಚೆಲುವಿನ ಬಲೆಗೆ
ಸಿಲುಕಿ, ಬಾನಳೆವ ನೇಸರನು ನೀನು!
ಹೆಪ್ಪುಗಟ್ಟಿದ ಚೆಲುವ ಮಥಿಸಿದರೆ ನೀನಲ್ಲಿ
ಆನಂದರೂಪ ನವನೀತನಿರುವೆ!
ಶಬ್ದಗರ್ಭಸಂಜಾತ ಸಾರ್ಥ ಧ್ವನಿಯಾಗಿರುವೆ
ಕವಿಯ ಬಗೆ ತಂತಿಯಲಿ ಮಿಡಿದು ಬರುವೆ!
ವಿಶ್ವಕಾವ್ಯದರಸಕೆ ಹೃದಯ ಜಿಹ್ವೆಯರಸಿಕ
ನೀರೂರಿ ಬೇರೂರಿ ಮಣ್ಣಿನೊಳಗೆ–
ಮನದಾಳವನ್ನಳೆದು ಮನವೆ ಮೈಮರೆವಂತೆ–
ದಿವ್ಯಕವಿ ಸೋತಿರುವ ತನ್ನ ಕೃತಿಗೆ!

ಬಾಳಗೋಕುಲ

ನೇಗಿಲಿನ ಮೊನೆಯಿಂದ ತೆನೆತುಂಬಿ ತರುವಂತೆ
ಹಲಧಾರಿಯಣ್ಣನೊಕ್ಕಲಿಗನಂತೆ
ಯಂತ್ರಜೀವದ ಚಕ್ರಧರ ಸುದರ್ಶನಕರನು–
ಕರ್ಮಕುಶಲನು ತಮ್ಮ ಕೃಷ್ಣನಂತೆ!
ಯಾದವರ ಕೈಯಲ್ಲಿ ಮುಸಲ! ಕೃಷಿಕನ ಸಫಲ
ಜಯದ ಮಾನಸ್ತಂಭ! ಕಣದೊಳಲ್ಲಿ
ಮಧುರ ಪ್ರೇಮದ ಮುರಳಿಗಾನ ಮನೆ, ಮನತುಂಬಿ
ಆನಂದ–ಯಮುನೆ ಹರಿದಿರುವಳಲ್ಲಿ!
ಸುರೆಕುಡಿದು ಬಡಿದಾಟ ನಡೆದ ಹಿಂದಣ ಕತೆಯ
ಹಲ ಮುಸಲ ಮುರಲಿಗಳ ಜಾಡು ಹಿಡಿದು..
ಕೃಷಿ, ಕರ್ಮ, ಕಲೆ, ಗಾನ ರಾಸಕ್ರೀಡೆಯ ನೆನಪು
ಮನುಕುಲದ ಗೋಕುಲವು– ಕನಸು ಹಿರಿದು!

ಮುಗಿಲು

ಬಾನಕಡಲಲಿ ತೇಲುತಿದೆ ಬಿಳಿಮುಗಿಲ ದೋಣಿಯು ಮೆಲ್ಲಗೆ!
ಕಾಣದಿಹ ನಾವಿಕನು, ಸಾಗುವ ನೆಲೆಯು ತಾನದು ಎಲ್ಲಿಗೆ?
ಆವ ಬಯಕೆಯೊ ಮುಗಿಲಿಗೆ?
ಆವ ಗುರಿ ನಾವಿಕನಿಗೆ?
ನೂಲು ಕಡಿದೆತ್ತರಕೆ ಹಾರುವುದಾರ ಗಾಳಿಯ ಪಟವಿದು?
ಗಾಳಿಗೊಡ್ಡುವ ನಾಯಕನ ಬರಿಮಾತಿನುಬ್ಬರವೇನಿದು?
ಹಲವು ಬಣ್ಣದ ರಂಜನೆ!
ನಿಜವನರಿಯದ ವಂಚನೆ!
ವರ್ಷಋತುವಿನ ಕಾರಕರಿತನ್, ಶರದ ಬಿಳಿತನ ಬೆಳಗಿಹೆ
ಹಿಮದಿ ಹೇಮಂತವಾಗಿಹೆ, ಶಿಶಿರದಲಿ ಶಿರಬಾಗಿಹೆ!
–ಚೈತ್ರಚೇತನವಾಗಿಹೆ!
ಭೀಷ್ಮಸಂಗ್ರಹಕಾಗಿಹೆ.
ನೆಲದ ಭಾಗ್ಯದ ಬರವಿಗಾಗಿಯೆ ಬಾನು ತೆರೆದಿಹ ಬಾಗಿಲೆ?

ಮಿಂಚು ಬೆಳಕಿನ ಸಿಡಿಲ ಸಿಡುಕಿನ, ನಲಿವು ದುಗುಡದ ಕಾರ್ಮುಗಿಲೆ!
ಬಾನ ತುರುಬಿನ ಕಣಗಿಲೆ!
ಜಗದ ಬದುಕಿನ ನೇಗಿಲೆ!
ನಿನ್ನ ಕಾಣದೆ ಮೌನಗನಿಯಲಿ ಮುದುಡಿಕೊಂಡಿದೆ ಕೋಗಿಲೆ
ನಿನ್ನ ನಿನದದ ಶ್ರುತಿಗೆ ಗತಿಯನು ಅಂಚೆ ತಿದ್ದಿದೆ ಆಗಲೆ.
ನಿನ್ನ ಚೆಲುವಿನ ನಿಲುವಿಗೆ–
ನಲಿವು ಹರಡಿದೆ ನವಿಲಿಗೆ.
ಜಗವನೇಯಲಿಕೆಂದು ಹಿಂಜಲು ಹತ್ತಿಯಂತೆಯೆ ಹರಡಿಹ
ನೀರದಾರದಿ ಬದುಕಿನೆಳೆಯನು ಬಾರಿಬಾರಿಗೆ ನೂತಿಹ
ಜೀವ ಜಾಲದ ಬಾಳಿಗೆ–
ಬಾನ ಬಾಳಿನ ದೇಣಿಗೆ! ..
ಮುಗಿಲ ಮುದ್ದೆಯ ಸವಿಯುತಿರುವುದು ನನ್ನ ಕನಸಿನ ನಾಲಗೆ!

ಪಂಪಸ್ಮರಣೆ

ನುಡಿಯತೋಟದಲಿ ಮೊದಲು ಮಾಟದಲಿ ಮೂಡಿಬಂದ ಸ್ವರವೆ!
ನಾಡ ಬದುಕಿನಲಿ ಹಾಡ ಸವಿಯನೊಲಿದಿತ್ತ ದಿವ್ಯ ವರವೆ!
ಪಂಪ!- ನಿನ್ನ ಹೆಸರಿಂದು ಹಸುರು! ಹೊಸತನಕೆ ಹಳೆಯ ಉಸಿರು-
ನಿತ್ಯ ಸತ್ಯಗಳ ಹಲವು ರತ್ನಗಳ ತುಂಬುಕಡಲ ಬಸಿರು!

ವರ್ಷ ಸಾವಿರದ ಹಿಂದೆ ಕನ್ನಡದ ವೆಂಗಿಪಳುವಿನಲ್ಲಿ
ಅಗ್ರಹಾರದಲಿ ಸೋಮಯಾಜಿಯಲಿ ಕುಡಿಯ ಬಿಟ್ಟ ಬಳ್ಳಿ,
ಚಿಗುರು ಹರಡಿ, ಅಭಿರಾಮದೇವನಭಿಸುತನು ಚೆಲುವ ಪಂಪ!
ಕಾವ್ಯ ಸುಮದಿ ಸವಿತುಂಬಿ ರಸದಿ ಕವಿ ಬೀರಿ ನುಡಿಯ ಪೆಂಪು!

ಕತ್ತಿ ಹಿಡಿದ ಕವಿ! ಕಂಠ ಹಿಡಿದ ಕಲಿ! ಕದನ, ಕವನ-ತ್ರಾಣ!
ಕಾವ್ಯ -ಕನ್ನಡದ ಮಾರ್ಗ ಮುನ್ನಡೆದ ಮಾರ್ಗ-ದೇಸಿ ಜಾಣ!
ಧರ್ಮ ಬಂಧವನು ಕಾವ್ಯದಂದವನು ಕೂಡಿ ಮರೆದು ವಿರಸ,
-ಜೈನಧರ್ಮ ಭವ ಕಾವ್ಯಧರ್ಮ ಶಿವ; ಸತ್ಯ ರಸದ ಸರಸ!

ನೀನು ಆದಿಕವಿಯಾದಿ ಉದಯರವಿ ಭುವಿಯ ಬೆಳಗುವಂತೆ,
ಇರುಳ ಮರೆಯಲಿಹ ಮಬ್ಬು ಕವಿದ ಇಹ, ಪರವನರಿಯುವಂತೆ
ಚೆಲುವು, ನನ್ನಿ, ಬಲ ಹಲವು ಮೌಲ್ಯಗಳ ಕಥೆಯ ಕಟ್ಟಿನೊಳಗೆ
ನುಡಿಯ ಸತ್ವವನು ಕಾವ್ಯ ತತ್ವವನು - ತುಂಬಿ ತಂದೆ ಇಳೆಗೆ!

ಬರಡುತನವ ಕಳೆದೆರಡು ಕೃತಿಯ ಕಳೆಗೂಡಿ ಕನ್ನಡಕೆ
ಕಣ್ಣು ಕೊಟ್ಟೆ, ತಿರೆಯಗಲ ಹಾರುವರೆ ಕೊಟ್ಟೆಯೆರಡು ರೆಕ್ಕೆ!

ಪ್ರಶ್ನೆ- ಪ್ರಶ್ನೆ

ಮೀನಾಕ್ಷಿ! ಹೇಳು ನೀನಾವ ಜಾತಿಯ ಮೀನು?
ಕೆರೆಯೆಲ್ಲಿ ನಿನ್ನ ಮುಖಕಮಲಕಿನ್ನು?
ಮುಂಗುರುಳ ಕರಿದುಂಬಿ ಕಚ್ಚದೇ ಕೆನ್ನೆಯನು?
ಮೂಗು ಸಂಪಗೆ ಬಾಡಿ ಒಣಗದೇನು?
ಕೆನ್ನೆ-ಕನ್ನಡಿ ಒಡೆದು ಚೂರಾಗೆ ಗತಿಯೇನು?
ಗಲ್ಲ ಗುಳಿಯಲಿ ನೀರು ನಿಲ್ಲದೇನು?
ತುಟಿ ತೊಂಡೆ ಹಣ್ಣಾಗುವನಕ ಕಾದದ್ದೇನು?
ಹುಬ್ಬು ಬಿದಿಗೆಯ ಚಂದ್ರನುಬ್ಬನೇನು?
ತುಂಬು ಚಂದ್ರನ ಮೊಗಕೆ ಬಿದಿಗೆಯ್ಯೆತರುವುದೇ?
ಜಡೆ-ಹೆಡೆಯ ತುಂಬ ವಿಷವಿರುವುದೇನು?
ಕಟಿ-ಸಿಂಹ ಕಾಡಲ್ಲಿ ಸುತ್ತಿ ಬಳಲಿಹುದೇನು?
ಗಜಗಮನೆ! ಸಿಂಹಕ್ಕೆ ಹೆದರೆಯೇನು?
ಕಡೆಗಣ್ಣ ನಲುನೋಟ ಮಿಂಚಗೊಂಚಲು ಹೌದೆ?
ಹಗಲಲ್ಲಿ ಆ ಮಿಂಚು ಸುಳಿಯಬಹುದೇ?..
.. ಪ್ರಶ್ನೆಗಳನಾಲೈಸಿ, ನಸು ಮುನಿದು, ಕೇಳಿದಳು..
'ಅರಸುವ ರಸಿಕ! 'ಗಂಡು'-ಹುಳವೆ ನೀನು?'
ರಣಕಣದ ಮಡಿಲಲ್ಲಿ

ಗಾಂಧಿ ಸ್ಮೃತಿ

ಧರ್ಮಪಾಲನೆಯೆಲ್ಲಿ?
ಗೆಲ್ಲುವುದೇ ಗುರಿಯೆಂಬುದೊಂದು ರೀತಿ..
ನಿಜದ ನಿಲುಗಡೆಗಾಗಿ
ನಾಡ ಬಿಡುಗಡೆಗಾಗಿ
ನೇರನಡೆ-ಗೆಲುವೆಂದು- ನಿನ್ನ ನೀತಿ .. „
ತುಕ್ಕು ಹಿಡಿದಾ ಹಳೆಯ
ಪ್ರಬಲ ಶಸ್ತ್ರದ ಕಳೆಯ
ಬೆಳಗಿ, ರಾಷ್ಟ್ರದ ಶಕ್ತಿ ಕಿಡಿಯೆಬ್ಬಿಸಿ,
'ಸತ್ಯಸಾಧನೆಯೆ ಗುರಿ,
ಅಹಿಂಸೆಯೊಂದೇ ದಾರಿ-
ನಿರ್ಭಯತೆಯೇ ಬದುಕು'- ಉದ್ಘೋಷಿಸಿ..
ನಿನ್ನ ಬತ್ತಳಿಕೆಯಲಿ
ಬಾಣವೆರಡೇ ಇರಲಿ,
ಹರೆಯದಲಿ ಮುದಿಯನೇ ನೀನಾದರು,
ಪ್ರತಿಪಕ್ಷ ಹೃದಯವನೆ
ಗೆದ್ದೆ ನೋಯಿಸದೇನೆ-
ಲೋಕವಿಜಯಗಳಿಲ್ಲಿ ಶರಣಾದರು!
ಯೋಧನಾಗಿಯು ಶಾಂತ!
ಮದುವೆಯಾದರು ಸಂತ
ಧರ್ಮಸ್ಥಾಪಕನಲ್ಲ ಆರಾಧಕ!
ಸೆರೆಮನೆಯೊಳಿದ್ದರೂ
ಲೋಕವನೆ ಸೆರೆಹಿಡಿದೆ,
ಗೆದ್ದರೂ ಆಳದಿಹ ಪರಿವ್ರಾಜಕ!
ರಾಜಕೀಯದ ವಿಜಯ-
ವಲ್ಲ ದಾರಿದ್ರ್ಯಭಯ
ಹೆಜ್ಜೆಯಿರಿಸದ ರಾಷ್ಟ್ರ ನಿನ್ನ ಕನಸು!
ಸ್ವಾವಲಂಬೀ ದೇಶ
ಅಲ್ಲಿ ಶಾಂತಿಯ ವಾಸ
-ರಾಮರಾಜ್ಯದ ನೆನಸು- ಎಷ್ಟು ಸೊಗಸು!
ಮರೆವು ತುಂಬಿದ ಬಗೆಗೆ
ಅಧಿಕಾರ ಲಾಲಸೆಗೆ
ಗಾಂಧಿ ಎನ್ನುವ ನುಡಿಯು ಸವೆದ ನಾಣ್ಯ
ನುಡಿದಂತೆ ನಡೆದಲ್ಲಿ
ಸ್ವಾರ್ಥವನು ಮರೆತಲ್ಲಿ
ಗಾಂಧಿ ಸ್ಮೃತಿ ತುಂಬುವುದು ನಾಡಪುಣ್ಯ.
ಕವಲುದಾರಿಗಳಲ್ಲಿ,
ಮಾರ್ಗದರ್ಶನದಲ್ಲಿ
ಕೈಮರವು ನೀ-ದಾರಿ ತಪ್ಪದಂತೆ!
ಚಿವುಟಿದರು ಚಿಗುರಿರಲಿ
ನಿನ್ನ ನೆನಪಿನ ಬಳ್ಳಿ
ಚರಕದಲಿ ಮಾಲೆಯೆಳೆ ನೂಲಿನಂತೆ!

ಕುರುಡು ಕನ್ನಡಕ

ಮಾಡ ತುಂಬ ದೀಪಗಳ ಬುರುಡೆಗಳು- ಬೆಳಕು ಬಾರದಲ್ಲ
ತಂಬೂರಿ, ವೀಣೆ, ಸಾರಂಗ, ಕೊಳಲುಗಳು – ಗಾನ ಕೇಳದ
ಹಸುರು ಮೇವಿರಲು ಹಸಿದ ಹಸುವು ಮೈಯೊಣಗಿ ಬಳಲಲೇ
ದಾರಿಗಾರ ಮುನ್ನಡೆಯ ಮರೆತು ಮಲಗಿರುವ ಏಳನೇಕೆ?
ಶ್ರುತಿಯ ಸ್ಮೃತಿಯ ಉದ್ಗ್ರಂಥ ರಾಶಿ– ಸ್ಮೃತಿ ಗತಿಗೆ; – ಮನಸಕಿಲ್ಲ
ಕಣ್ಣಿಗೊಂದು ಗಾಜಿರಿಸಿಕೊಂಡರೂ ಕುರುಡು ಕಳೆಯಲಿಲ್ಲ!
ಮಾತು ಮೊರಗಳನು ಕೂಡಿ ಕೇರಿದರು – ಕಾಳು ದೊರೆಯಲಿಲ್ಲ
ದಂಡೆ ಹೂವುಗಳ ಹೇರಿಕೊಂಡರೂ – ಕಂಪು ಹರಡಲಿಲ್ಲ!
ಬೇಲಿ ಕಟ್ಟಿ ಹೊಲಗಳಲಿ ಬೆಳೆವುದೇ ಕಳಿಗಿಡಗಳನ್ನೆ?
ಎಳೆಯ ಬಳ್ಳಿಯಲಿ ಮುಳ್ಳ ಮೊಗ್ಗೆ! –ಹಸಿ ಚಿಗುರು, ಹೂವುಸೊನ್ನೆ!

ಕ್ಯೂ ಸರ್ಪ

ಚುಚ್ಚದಿರು ಹದ್ದಿನೊಲು ತುತ್ತಿನೀಚೀಲವನು
ತೆರೆದ ಬಾಯಿಗೆ ಕಲ್ಲನುಣಿಸಬೇಡ!
ಒದ್ದು ಜಾಡಿಸಿ ಕರುಳ ಕದ್ದುಕೂಡಿಸಿ ಚೀಲ-
ಕೆಚ್ಚಲಿನ ಕೆನ್ನೀರ ಹೀರಬೇಡ!...
ಹಿಂಬಾಗಿಲಿನ ಸಂತೆ, ಬಡವನುರಿಸುವ ಚಿಂತೆ-
ಹೆರರ ಚಿಂತೆಯ ಸವಿಗೆ ಉಬ್ಬಬೇಡ!
ನಿನ್ನ ಕತ್ತಲೆ ಕೋಣೆ ಸಾಲು ಚೀಲಗಳಲ್ಲಿ
ತುಂಬಿಹುದು ಸಿಡಿಮದ್ದು! – ಹಿಗ್ಗಬೇಡ!
ಹಸಿದೊಡಲ ಬೆಂಕಿ ನಾಲಗೆಯ ಬಳಿ ಮೈಕಾಸಿ
ಕಿವುಡು ಕುರುಡನ ಹಾಗೆ ನಟಿಸಬೇಡ!
ನಿನ್ನ ಮುಂಗಡೆ ಕೆರಳಿ ಬುಸುಗುಟ್ಟುತಿದೆ ಜನತೆ-
ಕ್ಯೂಸರ್ಪ–ಕಾಳಿಂಗ; ಕೆಣಕಬೇಡ!

ಕಾಡದಿರು ನೆನಹೆ!

ಕಾಡಬೇಡ ನೆನಹೆ! ಕಳೆದ ನೋವ ಬಿಚ್ಚುವೆ,
ಬಾಡಿಕೊಂಡ ಹುಣ್ಣ ಕೆದಕಿ, ಬಗೆಯ ಚುಚ್ಚುವೆ!
ನೆಳಲಿನಂತೆ ಬೆನ್ನ ಬಿಡದೆ,
ಅರಿಯದಂತೆ ಸೆರಗ ಹಿಡಿದೆ,
ದೂರಸರಿಸಿದಂತೆ ಸನಿಹ ಬಂದು ಸೇರುವೆ,
ಮನದ ಹೊಸ್ತಿಲಿಗೆ ಹಳೆಯ ಕೊಳೆಯ ಚೆಲ್ಲುವೆ..
ಮಬ್ಬಿನಂತೆ ಹಬ್ಬಿ ಸುಳಿವೆ ಹಿಡಿತವಿಲ್ಲದೆ,
ಗಾಳಿಹೊತ್ತ ನಾತದಂತೆ ಕಾಣಲೊಲ್ಲದೆ,
ಬೀಜದೊಳಗೆ ಚಿಗುರಿನಂತೆ
ನೀರಿನೊಳಗೆ ಮುಗಿಲಿನಂತೆ–
ತಾನು ಕಟ್ಟಿ ತಂದ ಬುತ್ತಿ ಜೀವ ಬಲ್ಲುದೇ?
ಚೆಲ್ಲಿ ಬಿದ್ದ ಬಿತ್ತು ಮೊಳಕೆ ತಾಳದಿರುವುದೇ?
ಬಾನಿನಂಗಣದ ಮೇಲೆ ಮುಗಿಲ ಹಾಸುಗೆ
ಅಲ್ಲಿ ಕುಳಿತು ನಗುವದಂತೆ ನೂರು ತಾರಗೆ
–ಕಂಡ ಕಣ್ಣು ನೋಯುವಂತೆ,
ಚೆಲುವಿನೊರತೆ ಬತ್ತುವಂತೆ
ನೆನಹ ಕಿಡಿಯು ಸಿಡಿದು ಬಾಡಿ ಮನದ ಮಲ್ಲಿಗೆ–
ನಲಿವ ಕಾಣ್ಕೆ ನೆನಹು ನುಂಗಿ ಕರಗಿತಲ್ಲಿಗೆ!
ಕಡಲ ತಡಿಯ ಮಳಲ ಮಂಚ, ನಿತ್ಯ ನೂತನ–
ನೃತ್ಯವೆನಿಸಿ ತೆರೆಯ ಕುಣಿತ; ಚಿಗುರಿ ಚೇತನ–
ನೊರೆಯ ಪಾರಿಜಾತ ಮಾಲೆ
ಸ್ವಪ್ನ ಕಲ್ಪನೆಯ ಲೀಲೆ–
ನೆಲದ ಮೇರೆ ಮೀರಿ ಜೀವ ಹಿಗ್ಗಿತಾಕ್ಷಣ–
ಎದುರು ನಿಂದಿತೊಂದು ದೃಶ್ಯ– ಹೃದಯ ದಾರುಣ!..
ಮೌನಭೂಮಿಯಲ್ಲಿ ನೆನಹ ಸುಯ್ಲು ಹರಡಿದೆ–
ಮನದ ಮೌನದಲ್ಲಿ ಹಳೆಯ ಸದ್ದು ಅಡಗಿದೆ–
ಒಡೆದ ಕನ್ನಡಿಯ ಚೂರು
ಹಳೆಯ ಗಾಯದೊಂದು ಗೀರು–
ನೆನಹ ನೇಗಿಲಿನ ಮೊನೆಗೆ ಸಿಲುಕಿ ಕೆದರಿದೆ!
ಆವ ಬಾಗಿಲಿನ ದಾರಿ ನೆನಹಿಗಾಗಿದೆ?

ನಿರುತ್ತರ

ದೇಶಸೇವಕನೆಂಬ ಹಿರಿದಾಳು ನೀನೀಗ
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ಸ್ವಾತಂತ್ರ್ಯ ಸಾಧಕರ ತ್ಯಾಗಪಥದಲಿ ನೀನು
ಭೋಗರಥ ಹರಿಸಿದ್ದು ನಿಜವೆ? ಸುಳ್ಳೆ?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ನಿನ್ನ ಹೆಗಲಿನ ಭಾರ ಹೆರರ ತಲೆಗೇರಿಸುತ,
ನಿನ್ನ ಕೊರಳಿನ ಹಾರ ಅವರದಲ್ಲೆ?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ನೀನುಂಡ ಸವಿತುತ್ತು ನಿನ್ನ ದುಡಿಮೆಯ ಸೊತ್ತು
ನಿಜವೇ? ದಲಿತರ ಕಣ್ಣನೀರೆ? ಬೆವರೆ?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?

ರಾಷ್ಟ್ರಭಂಡಾರವನು ತನ್ನವರ ಹಿತಕೆಂದು
ಲೂಟಿ ಮಾಡಿದ ಧಾಳಿಕೋರನಾರು?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ಇಂಗಲಾರದ ದಾಹ–ಅಧಿಕಾರ ವ್ಯಾಮೋಹ
ಜನಸ್ವಾಮ್ಯ ಸೂತ್ರವನು ಕಡಿಯಿತೇನು?
ಉತ್ತರಿಸಲಾರೆಯಾ ಈ ಪ್ರಶ್ನೆಗೆ?
ಅಭ್ಯರ್ಥಿ ತಾನಾಗಿ, ಬಹುಮತವು ತನಗಾಗಿ
ಮಂತ್ರಿ, ಶಾಸಕ ಪದವಿ ತಪ್ಪದಿರಲಿ
ತಂದೆಗಳಿಸಿದ ಆಸ್ತಿಯಂತೆ ಹಕ್ಕುಳಿದಿರಲಿ
ಜನತಂತ್ರ ಮುನ್ನಡೆದು ಬೆಳಗುತಿರಲಿ,
ಈ ಎಣಿಕೆ ನಿನ್ನಲ್ಲಿ ಇಲ್ಲವೇನು?
ಉತ್ತರಿಸಲಾರೆಯಾ ಈ ಪ್ರಶ್ನೆಗಿನ್ನು?

ಅಲ್ಲಿ-ಇಲ್ಲಿ

ಆ ಮಹಲಿನಂಗಳದಿ ನಕ್ಷತ್ರಗಳು ಮಿನುಗುತಿವೆ,
ಹಾಲುಕಡ್ಡಿಯ ಬೆಳಕ ಹೊಳೆ ಹರಿಯುತಿದೆ,
ದಿಬ್ಬಣದ ನೆನಪು ಸಿಡಿಯುವ ಜೇನುಂಡೆ ಹಾರುತಿವೆ!..
ವಿಮಾನವೇರುತಿವೆ, ಕ್ಷಿಪಣಿ ನೆಗೆಯುತಿವೆ!
ಈ ಮನೆಗೆ ಅದರ ಕಿಡಿ, ಹೊಗೆ ವಾಸನೆಯೊಂದಿಗೆ,
"ಅಪ್ಪ ನಮ್ಮ ಜನ್ಮಕೆ ನಕ್ಷತ್ರವಿಲ್ಲವೆ?
ಹಾಲರುಚಿನೋಡದ ನಮಗೆ ಹಾಲುಕಡ್ಡಿಯೂ ಸಲ್ಲದೇ?"
ಎಂದಾಗ,
ಅದರ ಕಿಡಿ ಮನೆಯ ಸೋಗೆಗೆ ತಾಗಿ ಉರಿದಂತೆ
ಹೊಗೆ ಇವನ ಗಂಟಲ ತುಂಬಿಕೊಂಡಂತೆ,
ಜೇನುಂಡೆ ಮೈಗುದ್ದಿತೆಂಬಂತೆ-
ನಿಂತ ನೆಲ ಕುಸಿದಾಗ
ವಿಮಾನ, ಕ್ಷಿಪಣಿಗಳ ಚಿಂತೆಯೇಕೆ?
        ಅಲ್ಲಿ ಥಳಥಳಿಸುವ ಹೊಸದುಡುಗೆ
        ಅಕ್ಕ-ಬಾವನ ಕಾರ ಮೆರವಣಿಗೆ!
        ಹಬ್ಬದೂಟ- ತಿಪ್ಪೆಯಲಿ ನಾಯಿಗೂ ಕರಗದ ಹಾಗೆ..
ಇಲ್ಲಿ ಮೈತುಂಬ ಗಾಳಿ ಹೊದೆದಿರಲು ಸೆಕೆಯ ಭಯವಿಲ್ಲ
ಅಕ್ಕ-ಬಾವನಿಗೆ ಅಪಘಾತದ ಕಾರಣವಿಲ್ಲ!
ತಿಪ್ಪೆಯ ನಾಯಿ ಇಲ್ಲಿನೆಂಜಲಿಗೆ
ಜೊಲ್ಲಿಳಿಸಿ- ಬಾರದಲ್ಲ!
        ಎಂದು 'ಅಬ್ಬ! ಹಬ್ಬ!' ಎನ್ನುತ
        'ದಿವಾಳಿ' ಎನ್ನುತ ಬಾಯಿದೆರೆದಿರಬೇಕು!
        ಮಕ್ಕಳಬಾಯ ಮುಚ್ಚಿಸಬೇಕು!

ಕಾಮಿ ಕಂಡ ಕರುಣೆ

ಈ ಕವನಕ್ಕೆ ಮೈಸೂರು ವಿಶ್ವವಿದ್ಯಾನಿಲಯವು 1959-60ರ ಅವಧಿಯ "ದ ಸಿಲ್ವರ್ ಜುಬ್ಲಿ ಕನ್ನಡ ಗೋಲ್ಡ್ ಮೆಡಲ್"ನ್ನು ನೀಡಿತ್ತು. ಕವಿ ರವೀಂದ್ರರ 'Fruit Gathering' ನಲ್ಲಿ XXXVII ಸಂಖ್ಯೆಯ ಕವನ ಈ ಕವನಕ್ಕೆ ಪ್ರೇರಕವಾಯಿತು.

'ಬುದ್ಧಂ ಶರಣಂ ಗಚ್ಛಾಮಿ'

1. ಸಂಜೆಯಿಳಿಯುತಿರೆ ಜಗದ ನಿದ್ದೆಗೆನುತಿರುಳ ಹಾಸ ಹಾಸಿ
ಗಾಳಿ ಜೋಗುಳವ ಹಾಡಿ, ಮೈಗೆ ಕತ್ತಲೆಯ ಹೊದಿಕೆ ಹೊದಿಸಿ
ತುಂಬಿಕೊಂಡ ಕತ್ತಲೆಯ ಕೊಳದಿ ಮಿನುಮಿನುಗಿ ಹೂವು-ಚುಕ್ಕೆ
ಭೋರನೆಂದು ಓಂಕಾರ ತುಂಬಿಸಿರೆ ಕಡಲಿನೊಡಲು ತುಳುಕೆ ॥

2. ಬಾನ ಭಾಮಿನಿಯು ಚೆಲುವ ಚಂದ್ರಮನ ತಿಲಕವಿಟ್ಟು ಮೊಗಕೆ
ಶಾಂತಿರಸವು ಮೈದೋರಿ ಮಂಗಳದ ಮಹಿಮೆ ಬೀರಿ ಜನಕೆ
ಭುವಿಯೆ ಮೊಸರ ಕಡಲಾಗಿ ಹುಣ್ಣಿಮೆಯ ಚಂದ್ರ ಬೆಣ್ಣೆಯಾಗೆ
ಮುಗಿಯದೊಂದು, ಮನ ನುಡಿಯದೊಂದು ಸಿರಿ ತುಂಬಿ ಬಂತು ನೆಲಕೆ.

3. ತಿಂಗಳೊಡನೆ ತಂಗಾಳಿ ಸುಯ್ಯುತಿರೆ ಮಧುರ ಮೌನದಲ್ಲಿ,
ಬುವಿಯ ಚೆಲುವ ಕೆನೆ ತೇಲುತಿರಲು ರಸಗಂಗೆಯೊಡಲಿನಲ್ಲಿ
ಮುಳುಗಿ ಮಿಂದು, ಮನ ಮಣಿದು ಮಹಿಮೆಯೆಡೆ ಧನ್ಯವೆನಲು ಜೀವ
ಹಾಡಸವಿಗೆ ರಸಜೀವ ಹಿಗ್ಗುವೊಲು ಭೂಮಿವ್ಯೋಮ ಸರ್ವ!

4. ಏರುತಿರಲು ನಿಶೆಯೊಡೆಯ ಮೇಲೆ, ನೋಡಲ್ಲಿ ನೆಲದ ಮೇಲೆ
ಭೌಮಭಾಗ್ಯ ಭವಿಸಿತ್ತು ಯೋಗಿಯಲಿ, ಬೆಳಕಿನೊಂದು ಮಾಲೆ
ಧರಿಸಿದಂತೆ ಉಪಗುಪ್ತ ಬೌದ್ಧ ತಾನಿಳಿದ ನೆಲೆಯ ಕಾಣ !
ನೋವ ಬಾಳಿಗಿವ ನೆರಳನೀವವನ ದಿವ್ಯ ದಯದ ತಾಣ !

5. ಕಪಿಲವಸ್ತು ನೀಡಿತ್ತು ಜಗಕೆ ಗೌತಮನ ದಿವ್ಯ ಶೀಲ!
ಆವ ಚಿಪ್ಪಿನಲಿ ಮುತ್ತುಮೂಡುವುದೋ – ಬಲ್ಲರಾರು ಮೂಲ?
ಶ್ರೇಯ-ಪ್ರೇಯಗಳ ದ್ವಂದ್ವ ನಡೆದು ನಿರ್ದ್ವಂದ್ವವಾದುದೆಣಿಸಿ,
ಅಂದು ಪೂರ್ಣಿಮಾ ನಿಶೆಯ ತ್ಯಾಗದಲಿ ದುಃಖರಾಜ್ಯ ತ್ಯಜಿಸಿ..

6. ನೋವಿಗೊಂದು ನವತೈಲವರಸಿ, ಬರಿ ತಪದ ಮಳಲ ಹಿಂಡಿ
ಮರಳುಗಾಡಿನಲಿ ದಣಿದು ಕೊನೆಗೆ ದಯ ಚಿಮ್ಮಿ, ಬೆಳಕು ಕಂಡಿ..
ಸಾವು ನೋವು ಮುಸುಕಿದ್ದ ಬಾಳಿಗೆಂದೊಂದು ದೀಪ ತಂದು..
ಆಸೆಯುಳಿದ, ದಯದಾಸೆ ಬೆಳೆದ ಭವ ಬೆಳಗಿ ನಲಿಯಿತಂದು

7. ಭವ್ಯಭಾರತದ ಸುತ್ತು ಸುಳಿದು ಜನಕೆಲ್ಲ ತಿಳಿವನೊಯ್ದು
ಶಿಷ್ಯಕೋಟಿಯನು ನೆರಹಿ ನಲ್ಮೆಯಲಿ, ಬನ್ನ ಬವಣೆ ಕಳೆದು
ಮನದಿ ನಿಲಿಸಿ ಶರಣೆಂಬ ಸೂಕ್ತಿ, ಸುವಿಚಾರ ಬದ್ಧರೆನಿಸಿ
ಬುದ್ಧವಾಗಿ ಮನ, ಬೌದ್ಧರೆನಿಸಿ ಜನ ಮಣಿದುದವನನರಸಿ

8. ನವೋದಯದಿ ಭವಭಯೋದಯಕೆ ಸದ್ಭಾವೋದಯವ ಬೆಳಗೆ
ದಯೆಯ ದೌತ್ಯದಲಿ ದಲಿತ ದೀನರನು ಮುಕ್ತಿಶ್ರೀಯ ಬಳಿಗೆ
ಒಯ್ದು ನಲಿವಿನಲ್ಲಿರುಳು ಕರಗೆ, ಮೂಡಿಹನು ಮಹಿಮನಾಗಿ
ತರುಣ ಯೋಗಿ ಭವತರಣಕಾಗಿ, ಉಪಗುಪ್ತ ಬೌದ್ಧನಾಗಿ!

9. ದುಃಖವಿಜಯದೀ ದಂಡಯಾತ್ರೆಯಲಿ ಯೋಧನಿವನ ಕಾಂತಿ
ಬೆಂದು ಬಳಲುತಿಹ ಜಗಕೆ ನೀಡುತಿದೆ ಅಭಯದಾನ, ಶಾಂತಿ!
ಕಂಡರೊಮ್ಮೆ ಹೂವರಳಿದಂತೆ, ಮೈದಡವಿ ಹರಸುವಂತೆ–
ಮಂದಹಾಸ, ಬುವಿಗಿಳಿದು ದಿವ್ಯತೆಗೆ ರೂಪುಬಂದುದಿಂತೆ!

10. "ತುಷ್ಟಿ, ವಿನಯ, ಮೃದು ಕ್ಷಮಾಶೀಲತೆಯ ಸರಳ ವ್ರತದೆ ಬಾಳು;
ಜೀವಗಣಕೆ ದಯದೋರಲದುವೆ ತಪ, ಲೋಭ– ಕಡಿವ ಚೇಳು!
ತೆಗಳು–ಹೊಗಳಿಕೆಯ ಗೆಲ್ಲ–ಸೋಲ, ಬಲುದುಗುಡ–ಹಿಗ್ಗು, ಲಾಭ–
ನಷ್ಟವೆಂಬವಿವು ನಷ್ಟವೆನಿಸಿ ನೀ ಗಳಿಸಬೇಕು ಲಾಭ!"–

11. ಯೋಗಿಯೊರೆಯೆ ಯತಿಪುಂಜವಾಲಿಸಿರೆ ಹೃತ್ಕಂಜವರಳುತಿರಲು–
ಯಜ್ಞ ಜೀವಬಲ ಕುರುಡು ನೇಮದಲಿ 'ಧರ್ಮ' ನರಳುತಿರಲು..
'ಧರ್ಮಮೂಲ ದಯೆ' ಎಂಬ ನುಡಿಯು ಮನದುಂಬಿ ನಿತ್ಯ, ಸತ್ಯ..
ಭಾವಶುದ್ಧಿಯಲಿ ತಿದ್ದಿ ನಡೆಯುತಿರೆ ನಾಕವಹುದು ಮರ್ತ್ಯ!

12. ಬುದ್ಧದೇವನುದ್ಧರಿಸೆ ಜೀವಿಗಳ ತೋರ್ದ ಪಥದಿ ನಡೆದು
ಗುರುವಿನಾಜ್ಞೆಯನು ಪ್ರೇಮಗಂಧವನು ಹರಡಿ, ದೀಪ ಹಿಡಿದು
ಬುದ್ಧಶಿಷ್ಯ ಉಪಗುಪ್ತ ತರುಣಯತಿ ಮಧುರೆಗೈದಿ, ಪುರದ
ದುರ್ಗದಂಚಿನಲಿ ಮಣ್ಣಮಂಚದಲಿ ಪವಡಿಸಿದ್ದ – ವರದ !

ರಾಗಲೋಲೆ– ಆನಂದಿ

13. ಜೊನ್ನದೈಸಿರಿಯ ಸುರಿಯೆ ಚಂದ್ರಮನು ರಾತ್ರಿ ಪಾತ್ರಕೆಂದು,
ನಗರ ಜನರ ಹೃತ್ಕೇಂದ್ರದಲ್ಲಿ ರತಿಲಾಸ್ಯವುಕ್ಕಿ ತಂದು!
ಅಂತರಂಗ ಬಹಿರಂಗವಾಗಿ ಬಗೆಕದಡಿ, ತನುವ ಕಾಡಿ –
ಕಾಮದೇವನಾಳಾಗಿ, ವಿಟರು ನೆರೆದಿರಲು ಮೋಜು ಮಾಡಿ ..

14. ಕಾಯತರುವ ಕವಲೇರಿ ಕಾಮಕಪಿ ನೂರುಚೇಷ್ಟೆ ನಡೆಸಿ
ಭೋಗದಾಹದಲಿ ಹೃದಯದಾಸೆಗಳ ಕೆಡಹಿ, ನಲಿವ ಬಯಸಿ
ತರುಣ ಶ್ರೀಯ ಸಂಪದವನೆರೆದು, ಮನನಡೆಸಿ ಪ್ರಣಯಬಂಧ..
ಮೋಹದಗ್ನಿಯಲಿ ಬಲಿಯನಿತ್ತು ನಿಜಪ್ರೇಮ ಪುಣ್ಯಗಂಧ!

15. "ಬಾರ! ಬಾರ! ನಲಿನಲಿದು ಬಾಳಿನೀ ಹಿಗ್ಗನುಣಲಿಕಾಗಿ
ನಾಳೆ ಬಾರದಿರಲಿಂದು ಹೂವಿನೆಡೆ ಹರ್ಷ ಭ್ರಮರವಾಗಿ...
ನಿನ್ನ ಚಿತೆಯ ನೀನರಸಬೇಡ, ಕೊರಗುತ್ತ ಮುಂದನೆಣಿಸಿ
ಬಂದ ಭಾಗ್ಯವನು ತೊರೆಯಬೇಡ, ನಾನಿಹೆನು ಮುದವನುಣಿಸಿ"

16. "ಪ್ರಾಣಪದಕ ಬಾ! ಪ್ರಣಯ ತೀರ್ಥದಲಿ ರಾಸಕ್ರೀಡೆಯಾಡಿ,
ತನುವ ಸ್ಪರ್ಶದಲಿ ಪ್ರೇಮ ಪರುಷದಲಿ ಬನ್ನ-ಚಿನ್ನ ಮಾಡಿ,
ರಾಗಲೋಲೆಯಲಿ ಭೋಗಲೀಲೆ! ಅನುರಾಗ ತುಂಬಿ ಬಾರ!"
ಕರೆಯುತಿರಲು ಕಮನೀಯಕಾಂತೆ ಆನಂದಿ ರಸ-ವಿಹಾರ

17. ಹೃದಯ ಸರಸಿಯನು ಕದಡಿ ಕಾಮ ಮದ್ದಾನೆಯಾಗಿ ಬೀಗಿ,
ಬೆಡಗು ಹೆಣ್ಣಿನಾ ರೂಪಶಿಖಿಗೆ, ಮತಿ ಮೇಣದಂತೆ ಕರಗಿ-
ಭೋಗತೃಷೆಯ ಶೃಂಗಾರ ವಿಷಯ ವಿಸ್ತಾರ ಸಾರವುಣಲು
ಸಾಗಿದತ್ತು ಜನ ಮೋಹಕುಂಡದಲಿ ತನುವತೂಲವಿಡಲು..

18. ತಾರ, ಬಾರ, ತೋರೆಂದು ಕರೆಯುತಿರೆ ಕುಡಿಯಬಾಗು ಹುಬ್ಬು..
ಗಂಡಿನೆದೆಯ ಸೀಳುತ್ತಲಿರುವ ಕಣ್ಣಿರಿತ, ವಕ್ಷದುಬ್ಬು
ನಾಕದಿಂದಲಪ್ಸರೆಯ ಚೆಲುವಿಕೆಯ ತಳೆದುನಿಂದ ಹುಲ್ಲೆ-
ಗಣ್ಣ, ಕೇದಗೆಯ ಬಣ್ಣ, ಹೆಡೆಯಜಡೆಯವಳು ಜನದ ನಲ್ಲೆ!

19. ಮನೆಯ ಮಾರಿ, ಮಾನವತೆ ಮಾರಿ, ಮೈಮಾರುವಲ್ಲಿ ಬಂದು
ದೇಹದಾಹದಲಿ ಮಮತೆಯೊಣಗಿ, ಜನಮೋಹ ಭ್ರಾಂತರೆಂದು,
ತಣಿಸಲೆಂದು ಸುಡಿ ಬೆಂಕಿಗಿನಿತು ಸುರಿದಿಹಳು ಆಜ್ಯ, ಧನವ
ಕಾಣ್ಕೆ ಪಡೆದು ಮನ ಕೊಳ್ಳೆಹೊಡೆದು ತನುವಿಜಯ ತುಂಬಿ ವಿಭವ!
ಹಗಲ ಬಯಸಿತಿರುಳು

20 "ಜನ್ಮ ದುಃಖ ಮುದಿತನವು ದುಃಖ, ಬಲು ವ್ಯಾಧಿ ದುಃಖ, ಮರಣ
ದುಃಖ ಲೋಕವಿದು ಶೋಕತುಂದಿಲವು! – ಬಯಸಲಹುದು ತರಣ
ಕಾಮದಾಸೆ, ಭವ ಭೋಗದಾಸೆಗಳ ತೊರೆದು ಮುಕ್ತನಾಗಿ
ನಾಶವಿರದ ನಿರ್ವಾಣಪದಕೆ ನಡೆ ಮುಕ್ತಕಾಮಿಯಾಗಿ!"

21. ಬೋಧಿಸಿರಲು ಉಪಗುಪ್ತ ಬೌದ್ಧಯತಿ ನಗರ, ಕೇರಿಯಲೆದು,
ದುಃಖಿ ದೀನ ದಾರಿದ್ರ್ಯ ಪೀಡಿತರ ಬಳಿಗೆ ಕರೆದು, ನುಡಿದು-
ತಬ್ಬಿ, ಹರಸಿ, ಸುಖಚಿತ್ತರೆನಿಸಿ, ಸಮ್ಮೋದಗೊಳಿಸುತೊಲಿಸಿ,
ಅಳಲನರಿವಿನಿಂ ಕಳೆದು, ಸರ್ವರನು ನಲಿಸುತ್ತಿದ್ದನರಸಿ!

22. ಪ್ರಣಯಸೌಧದಿಂದೊಮ್ಮೆ ಕಂಡವಳು ಯತಿಯ ತನುವ ಕಾಣ್ಕೆ!
ನೋಟದಲ್ಲೆ ಮನಸೋತಳಾಕೆ ತನ್ಮಯತೆಯಾಂತು ಬಯಕೆ
"ಬೇಕು! ಬೇಕು! ಎಂದೆಂಬ ಭಾವವುನ್ಮಾದ ಹೊಂದುತಿರಲು
ಕಾಮಿಸಿತ್ತು ಹೆಣ್ಮನವು ಯೋಗಿಯನು –ಹಗಲ ಬಯಸಿತಿರುಳು!

23. ಮೂಡನಂಚಿನಲ್ಲುಷಾರಾಣಿ ರಾಜಿಸಲು ನೃತ್ಯವೆಸಗಿ
ಇರುಳಗಣ್ಣಿನೆವೆ ಮುಚ್ಚಿಗೊಳ್ಳುತಿರೆ ಹಗಲುಗನಸಿಗಾಗಿ,
ಅಂಧವಾದ ನೆಲ ಪ್ರಭೆಯ ಬಯಸುವಂತಿತ್ತು ಸುಪ್ತ-ತೃಷ್ಣೆ,
ಮೂಡಿಬಹದೆ ರವಿ ಬೆಳಕು ಬಹುದೆ? – ಬುವಿ ಕಳೆವುದೆಂತು ಕೃಷ್ಣೆ?

24. ಪ್ರಣಯಚಿತ್ತೆ, ಸಂಭೋಗಪ್ರೀತೆ ಆನಂದಿ ಕಂಡು ಯತಿಯ
ಎದೆಯ ಕಣಿವೆಯಲಿ ಮದನ ನಿರ್ಝರಿಣಿ!- ಪಡೆಯದಾಗಿ ಗತಿಯ!
ಸುಂದರಾಂಗ ದೃಢಕಾಯ ಯೋಗಿಯನು ಬಯಸುತಿತ್ತು ದೇಹ!-
ಭೋಗದೆಲ್ಲ ಸಂಭ್ರಮದ ಭ್ರಮೆಗೆ ಉದ್ವೇಗವಾಂತ ದಾಹ!

25. ಬಳ್ಳಿ ಮಿಂಚು ಮೈತಾಗಿತೆನಲು ಚಂಚಲಿತ ಪುಳಕವಾಂತು
ಮಿಡಿಯುತಿತ್ತು ಮನಮೋಹ ತಂತಿಯನು ಕಾಮ ಶ್ರುತಿಯ ನೋಂತು
ಭಾವದೊಂದು ಬಿರುಗಾಳಿ ಬೀಸಿ ನೆಲೆಗಾಣದಾಗಿ ಮನಕೆ-
ಸೋತಳಂದು ಸುಳಿಗುರುಳ ಚೆನ್ನೆ- ಜತಿಬೇಟದೆಣಿಕೆಯಾಕೆ!

26. ಕಾಣ್ಕೆ ಸವಿಯ ಮನತುಂಬಿಯವಳು, ಕಣ್ಣೊರೆಸಿ, ಶಿರವ ಬಾಗಿ,
ಕೈಯಮುಗಿದು, ಕುಲದೈವ ಪದಕೆ ನಮಿಸುತ್ತ ನಮ್ರಳಾಗಿ,
ಚಾರುಗಾತ್ರೆ ತನ್ನರಿವ ಮರೆತು ತಾನಿರುವ ಸೌಧದಿಂದ
ಜಾರಿ, ಬಳುಕಿ, ಬಾಗುತ್ತ ಬಂದಿಹಳು, ತುಳುಕಿದಾಸೆಯಿಂದ!

27. ಭೋಗಲೋಲೆ ನಡೆದೋಡಿ ಕೊನೆಗೆ ಯತಿರಾಜನಿದ್ದ ಕಡೆಗೆ -
ಸರ್ವಸಂಗಸಂತ್ಯಾಗಿ ಯೋಗಿಯಾಗಿದ್ದ ಭಿಕ್ಷುವೆಡೆಗೆ
ನುಡಿಯಲೆಂದು ಕೊರಳೆತ್ತಿ ಮಣಿದು, ಮಾತಿಲ್ಲವಾಗೆ ಬಗೆಗೆ-
ಬಳುಕುತಿರಲು ಮೈ, ಚರಣತಲಕೆ ಕೈ ಮುಗಿದಳಂತು ಕೊನೆಗೆ!

28. ಕಾಯವಲ್ಲಿಯಲಿ ನಗೆಯ ಮುಗುಳ ಚೆಲ್ಲುತ್ತ ಕಣ್ಣಕುಣಿಸಿ,
ಪ್ರಣಯಲೋಕ ಸಂಪದವನೆಲ್ಲ ಮೈ ಬೊಗಸೆ ತುಂಬಿ ಸುರಿಸಿ
"ಪ್ರಾಣರಮಣ ಯತಿ, ಬಾರ ಮನೆಗೆ, ಬರಬಾರದೇನು ಹಿರಿಯ?
ಏರು ಬಾರ ಮನ್ಮನೋಪೀಠ! ಬಡಿಸುವೆನು ನಲುಮೆ ಸಿರಿಯ!"

29. ಬುದ್ಧ ಶಿಷ್ಯ ಬಗೆಗಡಲಿನಲ್ಲಿ ಮುಳುಗಿದ್ದು ಕರುಣೆ ಮೂಡಿ
ಶರಧಿ ಗಾಳಿಯಲಿ ಸುಯ್ಯುವಂತೆ ನಿಡಿದುಸಿರು ಬಂತು ಮುಖದಿ
ಲಕ್ಷ್ಯವಿಟ್ಟ ನಿರ್ಲಕ್ಷ್ಯ ಭಾವದಿಂ ಯೋಗಿ ನಡೆದ ಮುಂದು
ದುಃಖ ಬೀಜದಲಿ ಸುಖದ ಫಲವು ಸಿಗಲಾರದೆಂದು, ನೊಂದು

30. ಬಯಕೆ ಬೆಟ್ಟವನು ಬಡಿದಸಿಡಿಲಿನೊಲು ಯತಿಯು ಸಾಗೆ, ಭ್ರಾಂತೆ
ನೆರಳ ಹಿಡಿದು ಮುದ್ದಿಕ್ಕಿ ತಾನು ಮೈನೋವುಗೊಂಡಳಂತೆ-
ಗರಿಹಗುರ ಮುಗಿಲು ಬರಿ ಬಂಡೆಯಾಗಿ ಬಗೆ ಬರಿದು ಬಾನಿನಲ್ಲಿ
ಗಗನಚುಂಬಿ ಹಂಬಲದ ಸೌಧವನು ಕೊಡಹಿ, ಕೆಡವಿತಲ್ಲಿ!

'ತರುಣ ಶರಣ! ನೀದೋರು ಕರುಣ'

31. ಬಿಸುಟ ಕುಮುದದೆಳೆ ಕರುಳು ಬೇಸಿಗೆಯ ಬಿಸಿಗೆ ಬೇಯುವಂತೆ,
ಬೆಂಕಿಬೆಟ್ಟದಲ್ಲರಗಿನಾಲಯವು ತಾನೆ ಕರಗುವಂತೆ-
ಎಲ್ಲಿವಿದ್ದರಿನ್ನೊಂದ ಪಡೆಯೆನೆಂದೆಂಬ ಕೊರಗು ತುಂಬಿ
ಬಾಡುತಿರಲು ತನು, ಬೇಡುತಿರಲು ಮನ- ಬರಡು ಭಯಕೆ ನಂಬಿ.

32. ಎಟಕದೆತ್ತರದ ಫಲವ ಬಯಸಿ, ನೆಗೆನೆಗೆದು ಬಳಲುವಂತೆ,
ಕಾಣದೊಂದು ಮೊನೆ ಮೈಯ ಚುಚ್ಚುತಿರೆ, ನೋವನೀಯುವಂತೆ,
ಪ್ರೀತಿಯಿಲ್ಲ, ಸಮ್ಮೋದವಿಲ್ಲ, ಹಗಲೆಲ್ಲ ಚಿಂತೆಯಿರುಳು
ಆಸೆಯಿತ್ತು ಕಡಲಂತೆ, ಕಾತರವು ತೆರೆಯೊಳಿದ್ದಿತೆನಲು..

33. ಬಯಕೆ ಹಾಯಿಯನು ಭ್ರಮೆಯಗಾಳಿ ಬಿರುಸಾಗಿ ಸಾಗಿಪಂತೆ,
ನೆನಹು ನುಗ್ಗಿ ತೆರೆಯಂತೆ ನೆಗೆದು ಬರೆ, ಹಿಂದೆ ಸರಿಯುವಂತೆ
ಹೃದಯದೈವ ತಾ ಬಾರದಾಗಿ ನಿಟ್ಟುಸಿರ ಸುಯ್ವಳಲ್ಲೆ,
ಗಳಿಗೆ ಗಂಟೆಗಳ ಯುಗವ ಮಾಡಿ, ಆನಂದಿ ನೊಂದಳಲ್ಲೆ..

34. ಸಹಿಸದಾಗಿ ತನ್ನೆದೆಯ ನೋವನಿನ್ನುರಿಯನೊರೆಯಲೆಂದು,
ಮರಳಿ ನಡೆದಿಹಳು ಭಿಕ್ಷು ಸನ್ನಿಧಿಗೆ, ನಮಿಸಿ ನುಡಿದಳಂದು,
"ಬಾಳಲಾರೆ! ನಾ ಸಾಯಲಾರೆ! ನಿನಗಾಗಿ ತನುವು, ರೂಪು!
ತರುಣ ಶರಣ! ನೀದೋರು ಕರುಣ- ಕೈಗೊಂಡು ಹೆಣ್ಣ ಮುಡಿಪು!"

35. ಕಾಯ ಕಾಂತಿ ಮಧುಪಾನದಂತೆ ಮೈಗಮಲು ತುಂಬುತ್ತಿತ್ತು!
ಕಣ್ಣ ದಾಳಿಯದು ಬಗೆಯ ಕೋಟೆಯನು ಲಗ್ಗೆ ಹತ್ತುತ್ತಿತ್ತು!
ಕೊರಡು ಕೊನರುವಂತಿತ್ತು, ಮುಪ್ಪಿನಲಿ ಬಯಕೆ ಚಿಗುರುತಿತ್ತು1
ಆದರೇನು? ಸನ್ಯಾಸಿ ಎದುರಿಗವು ಎಲ್ಲ ವ್ಯರ್ಥವಾಯ್ತು!

36. ಶಾಂತ ಧೀರ ನಿರ್ಲಿಪ್ತ ಶರಧಿ ಸುಯ್ಯಿಡುವ ರೀತಿ ಬೌದ್ಧ
"ರಮಣಿ ಮಣಿಯೆ ! ನಾ ಬಾರದಿರುವೆನೆ? ಬಂದೆ ಬರುವೆ ಬದ್ಧ!
ಕಾಲನೊಮ್ಮೆಗನುಕೂಲನಾಗಿರಲಿ, ಇಂದೆ ಬಯಸಬೇಡ!
"ಅಂದು ನಿನ್ನೆಡೆಗೆ ಬಂದೆ ಬರುವೆ, ನೀನಿದಕೆ ದುಡುಕಬೇಡ"

37. ಕೇಳಿ ನುಡಿಯನರೆಚಣಕೆ ರಮಣಿ ನಿಂತಲ್ಲೆ ಸ್ಥಬ್ಧಳೆನಿಸಿ,
ದೈನ್ಯಪೂರ್ಣ ದುಶ್ಚಿತ್ರದಂತೆ ಸವಿ ಕರಗಿ ಕಹಿಯೆನ್ನಿಸಿ
ಬಾನಗೋಪುರವು ಮಣ್ಣಿಗಿಳಿದು, ನೆಲೆಗಂಬ ಕುಸಿದು ಬಳ್ಳಿ-
ಯುರುಳಿ, ಕಿವಿಗೆ ಬಿಸಿಸೀಸದಂತೆ ವಾಗ್ಬಾಣ ಹೊಕ್ಕು ಹೊರಳಿ...

38. ಒಮ್ಮೆ ತ್ವೇಷ, ಮತ್ತೊಮ್ಮೆ ತೋಷ, ಚಣಕೊಂದು ಬಣ್ಣ, ವೇಷ!
ಏರಿ ಜಾರುತಿಹ ಬೆಟ್ಟದಾರಿಯಲಿ ಭೀತಿ ಮಿಲಿತ ಹರುಷ!
ಕಾಮಚಾಪದಲಿ ನೆನಹ ಶರವ ಗುರಿಮಾಡಿ, ನಿಜವ ಮರೆತು,
" ಬಂದೆ ಬರುವನವ, ಬಾರದಿರುವನೆ?" - ಮೆಲುಕು ಹಾಕಿ ಮಾತು..

39. ಆಸೆ ಬರಡುನೆಲ, ರೆಕ್ಕೆ ಮೂಡದಿಹ ಹಕ್ಕಿ, ಸುಯ್ಯನೆರಳು-
ದೂರಕಂಡ ಮೃಗಜಲವ ನಂಬಿ ತುಯ್ದಾಡುತಿರಲು ಕರುಳು!
ಜೀವದರಳಿ ಮರದೆಲೆಗಳುರುಳಿ, ಹೊಸ ಹಸುರ ಹೆಸರೆ ಇಲ್ಲ-
ಮಾಗಿಬಂತೆ? ಶಿಶಿರದಲಿ ಚಿಂತೆ- ತಾಯಿಬೇರು ಬಾಡಲಿಲ್ಲ!

ದೃಶ್ಯಾಂತರ!

40. ಬದುಕಿನಾಟದಲಿ ಜೀವಜೀವಿಗಳು ಪಾಲುಗೊಂಡು, ಆಡಿ
ತಣಿವು, ದಣಿವು, ಏರಿಳಿತ ಸಹಜವಿದು ನಿತ್ಯ, ನವ್ಯ-ಮೋಡಿ!
ಬಾಳಹೊಳೆಯ ಮೈತುಂಬಿ ಕೊರಗಿದರು ಬತ್ತದಿರುವುದೆಂದು-
ಬಾಳೆಗಿಡವು ಗೊನೆಬಿಡುವ ಕೊನೆಗೆ ಬಳಿಯಲ್ಲಿ ನಾಲ್ಕು ಕಂದು!

41. ಕೊರಡು ತೇದು ಶ್ರೀಗಂಧ ದೊರೆಯುತ್ತಿತ್ತಲ್ಲಿ ಕೆಲವು ಬಾರಿ!
ಒಣಗಿ ಸೊರಗಿ ಬರಿಬೂದಿಯಾಗಿ ಸಾಗಿತ್ತು -ಹಲವು ಸಾರಿ..
ಕಾಲನಾಳದಲಿ ದಿನದ ಬಿಂದುಗಳು ಹರಿದು ವರ್ಷವಾಗಿ
ಸಾಗುತಿತ್ತು ಭವ್ಯನಾಟ್ಯ ರಂಗದಲಿ - ದೃಶ್ಯ ಅಂಕವಾಗಿ

42. ಕೆದರು ಕೇಶ ನಿಸ್ತೇಜ ನಯನ, ತಾನುಟ್ಟ ಸೀರೆ ಹರುಕು
ಜಗಿದ ಕಬ್ಬಿನಂತಿತ್ತು ದೇಹವಾರಿರಲು ಬೆಡಗು - ಬೆಳಕು!
ಅಂದು- ಇಂದು, ಆ ಚಿಗುರು-ದರಗು ಜವ್ವನಕೆ ಮುಪ್ಪು ಇಳಿದು-
ಕನಸು ಕರಗಿ ಕಲ್ಲಾಗಿ ಹಾಸು ನೋವಾಗಿ ನಲಿವು ಸುಳಿದು-

43. ಗಳಿಗೆಗಳಿಗೆ ಮೈ ಪೂಸಿಕೊಂಡ ಶ್ರೀಗಂಧವೆಲ್ಲ ಬರಿದು–
ರೋಗತುಂಬಿ ದುರ್ಗಂಧ ಹಬ್ಬಿ ಆನಂದಿ ನರಳಲಿಂದು..
"ವ್ರಣದ ಬಾಧೆ–ದುರ್ಮರಣ ಬೋಧೆ ನಾ ಸಹಿಸೆನೆಂದು ಕೂಗಿ
ಮದನಕೇಳಿ ನಡೆದಿದ್ದ ತಾಣ, ಸುಡುಗಾಡ ನೋಟವಾಗಿ..

44. ಮಾರಿಕೊಂಡ ಮೈಯಪ್ಪುತ್ತಿದ್ದ ಕೈ, ಸೆಳೆಯುತಿದ್ದ ಕಣ್ಣು,
ಸವಿಯನಿತ್ತ ತುಟಿ, ಮೆರುಗನಿತ್ತ ಕಟಿ– ಎಲ್ಲ ಕೊಳೆತ ಹಣ್ಣು!
ಬಳ್ಳಿಯರಳುಗಳ ಕಂಪನಿತ್ತವನವಿಂದು ಬರಿದು ಬಂಜೆ!
ಮುಳ್ಳು ಕಳ್ಳು ಬಳೆದಿರಲು ಬಾಳಿಗಿಳಿದಿತ್ತು ಕವಿದ ಸಂಜೆ!

45. ಧನವ ಸುರಿದ ಜನ ದೂರಸರಿದು, ಮನಮುದುಡಿ ಹೇಸುತಿತ್ತು!
ಮುತ್ತನಿತ್ತ ಮೊಗ ತುತ್ತಿಗಾಗಿ ಕಣ್ಬಾಯಿ ಬಿಡುತಲಿತ್ತು!
ಮಂದಿಯೆಲ್ಲ ಸಮ್ಮೋದಕೆಂದು ಗೈದಿದ್ದ ವೃತ್ತಿ –ಶಾಪ
ತಾಪ ತನುವ ಕೊರೆಕೊರೆಯುತಿರಲು ಅನುಭವಿಸಿತಿಂತು ಪಾಪ!

46. "ಸಹಿಸಲಾರೆ! ನಾ ಸಾಯಲಾರೆ! ಮಿದು ಮೊಗ್ಗೆ ಮೇಲೆ ಬಂಡೆ–
ಉರುಳಿದಂತೆ ರುಜೆ, ಹಾರಿ ಹೋದವಳಿಹಿಂಡು ಮಧುವನುಂಡೆ!
ಯಮನು ಬಾರ, ಕೊನೆಯೂರ ತೋರ, ನೀ ಹಳಸ ಹೆಣ್ಣಕಂಡು..
ಬದುಕಲಾರೆ ಬಲು ಬನ್ನ ಬವಣೆಗಳ ವ್ಯಾಧಿ ಭೋಜ್ಯವುಂಡು"–

47. ಮಿಡಿದು ಪ್ರಣಯರಸ ಲಹರಿ ತಂತಿಮುರಿದಳಲ ಕರುಳ ಹಾಡು ..
ರಾಗಲೋಲೆ ಆನಂದಿ ಸೌಧವಿಂದುರುಳಿ ಬಿದ್ದ ಪಾಡು ..
ಬೆಡಗಸೊಡರ ಜವ್ವನದ ಎಣ್ಣೆಯಾರಿರಲು ಬತ್ತಿಯುರಿದು..
ಬಾಳ ತೊರೆಯು ನಡುದಾರಿಯಲ್ಲಿ ಬತ್ತಿತ್ತೆ? – ಕಡಲನುಳಿದು!

48. ಅರುಣಗೀತ ಹಾಡುತ್ತಲಿತ್ತು ತಂಬೆಲರು ಬೀಸಿ, ಬೀಸಿ,
ಅಂಬುಜಾತದಳದೆರೆಯುತಿತ್ತು ತನಿಗಂಪ ಸುತ್ತು ಸೂಸಿ
ಮೂಡುದಿಕ್ಕು ಕೆಂಪಡರುತಿತ್ತು ನವನವೋದಯವ ಸಾರಿ –
ಜಗದ ಹಾಳೆಯಲಿ ಹಗಲ ಹಾಡ ಕವಿ–ರವಿಯು ಸ್ಫೂರ್ತಿಬೀರಿ..

49. ಬಗೆಯ ಬಾಗಿಲನು ತೆರೆದು ತಿಳಿವಿನೆಳೆ ಬೆಳಕುಸುರಿದು ತುಂಬಿ..
ಕವಿದಕತ್ತಲೆಯ ತೊಳೆದು, ನೊಂದಲಿಹ ಸೊಡರು ಹೊಳಪುಹಂಬಿ..
ಜೀವರಾಶಿಗಳ ಚೇತನಾಗ್ನಿಯನು ತಿದಿಯನೊತ್ತಿ ಬೆಳಗಿ..
ಭವಕೆ ಭಾಸ್ಕರನು ಬಾಳಬಾನಿನಲಿ ಭವಿಸಿ ಬುದ್ಧನಾಗಿ!

50. ಧರ್ಮದೀಪ ಪ್ರಭೆ ತಳೆವ ಮುನ್ನ ಭಯವಿತ್ತ ಘೋರತಮವು,
ದಯೆಯ ನೇಸರನು ಮೂಡದಿರಲು ದಳದೆರೆಯದಿದ್ದ ಹೂವು..
ಆಸೆ, ಹಿಂಸೆ ಮುಸುಕಿದ್ದ ಬದುಕಿನಲಿ ಮಾಯವಾದ ನಲಿವು..
ತುಂಬಿಬಂತು, ಬೆಳಕಿಳಿದುಬಂತು ಕತ್ತಲೆಯದೂಡಿ ತಿಳಿವು!

51. "ದಯಾಚಿತ್ತರೆನೆ ಬಾಳಲೆಂದು ಜನರೆಚ್ಚರಾಗಿರೇಳಿ!"–
ಜಡದ ನಿದ್ದೆಯನು ಕುಕ್ಕಿ ಕುಕ್ಕುಟನ ಕೂಗು ಕಿವಿಗೆ ಕೇಳಿ,
ಕಂಡರೊಮ್ಮೆ 'ನವದೀಪನಗರ' ಬೆಳಕೆಲ್ಲಿ? ಹೇಗೆ ಬಂತು?
–ಕವಿದ ನಿದ್ದೆ, ನಿಶೆಯೆಂತು ಕರಗಿಹುದು? ಬೆರಗು ಭುವಿಯನಾಂತು!

52. ಸೂರ್ಯನುದಯ ಸಂಭ್ರಮದ ನದಿಯ ದಡ ಕಂಡ ರೀತಿ ಬೌದ್ಧ
ದೀಪದೆಣ್ಣೆ ನೀರಲ್ಲಿ ತೇಲುವೊಲು ಅಂಟದಂತ –ಬದ್ಧ!
ಭಿಕ್ಷು ಸಂಘವೊಡಗೂಡಿ ನಡೆದಿರಲು ದಾಟಿ ಪುರದ ಬೀದಿ
ದೀನ ಜನರ ಕರೆದೊಲಿದು ಹರಸಿರಲು ನಲ್ಮೆಯುಲಿಯನೂದಿ

53. ಮುಂದೆ ಮುಂದೆ ನಡೆದಿತ್ತು ವೃಂದ ಪಾವಿತ್ರ್ಯ ತುಂಬಿ, ತುಂಬಿ
ದೂರದಿಂದ ಕಣ್ತೆರೆದು ಕಂಡಿರಲು ಮಹಿಮ ಹೃದಯ ತುಂಬಿ..
ನರಳಿ ನೋಯುತಿರುವುರುಳಿ ಬಳಲುತಿಹ ದೇಹ-ಜೀವ ಭಾವ!..
ಸನಿಹಸೇರಿ, ದಯೆಗೊಂಡು, ಮಹಿಮನವ ಸ್ಮರಿಸಿಕೊಂಡು ಪೂರ್ವ -

54. ಚೆಲುವ ಹೆಣ್ಣವಳು ಬಂದಳೆನ್ನ ಬಳಿ ಬಯಸಿ ಕಾಮದೊಸಗೆ-
ಸೆಳೆವ ಕಣ್ಣುಗಳ ಮೈಯ ಬಳುಕುಗಳ ಒಲವ ತಂದಳೆನಗೆ!
ಕಾಮನಾಟದಲಿ ಗೊಂಬೆಯಾಗಿ ಮುರಿದಿರುವ ದೀನೆಯಹುದು!
ರೂಪರೂಪಕದ ಅಂಕವೆರಡು! ದ್ವಯಧ್ರುವಗಳಂತರಹುದು!

55. ದೀಪನಕ್ಕಿತೆಂದೋಡಿ ಹಾತೆಗಳು ಬೀಳುತಿಹವು- ನಲಿದು..
ಕೊನೆಗೆ ಹಣತೆಯಲಿ ಕೀಟ ಕೆಲವು, ಸೊಡರಿಲ್ಲ, ಬೆಳಕು ಬರಿದು..
ನಿತ್ಯವುಳಿದ ಚಿರದುಃಖಮೂಲವಿದು ಕೊರೆಯುವಾಸೆ ಕೀಟ..
ತಣಿಸಲೆಳಸಿ, ಬೀಳಿಹಳು ಬಾಳ- ಬರಿದಿಂದು ಕಾಮನಾಟ!

56. ಬಾಳ ಬನಕೆ ಮಧು ಮಾಸ ತಂದ ಜನರೆದೆಯ ರತಿಯೆ ಇವಳು?
ತುಂಬಿಕೊಂಡ ಕೊಳ ಹೀರಿಕೊಂಡೆತೆನೆ - ಗ್ರೀಷ್ಮ ರವಿಯ ಬಿಸಿಲು..
ಒಲವು-ಒನಪು ಮಿನುಗಿದ್ದ ಹೊಳಪು ಇಂದಿಲ್ಲ ಬಣ್ಣ ಕಳೆದು..
ಕ್ಷಣಿಕವಾದ ಸೊಗ- ದುಗುಡದೂರಿಗಿದೆ ಬಾಗಿಲಂತೆ ತೆರೆದು"

57. ತಡೆಯದಾಗಲೋಡೋಡಿ ಮುಂದೆ ಚಿರದುಃಖಿಯಿರವಿಗಲ್ಲಿ
ಕಾಲನೂರಿ ಕುಳಿತಿದ್ದು ಮೊಗವನಿನ್ನೆತ್ತಿಕೊಳ್ಳುವಲ್ಲಿ
"ಯಾ..ರು?" ಎಂದು ನಡುನಡುಗುತ್ತಿದ್ದ ನುಡಿ ಕೇಳಿದಾಗ ಕರಗಿ,
"ಬಂದೆ ನಾನು! -ನಿನ್ನೆದೆಯ ದೈವ! ನೀ ಬಳಲಬೇಡ ಮರುಗಿ"

58. ತನಗೆ ತಾನೆ ಹೇಸಿದಳು ಆಕೆ, "ನಡೆದೂರ ದಯವನಿಟ್ಟು
ನಿನ್ನ ಪೂಜೆಗಿಂದಲ್ಲ ವೇಳೆ, ನೀ ಸಾರು ನನ್ನ ಬಿಟ್ಟು"
ಮಾತು ಮುದುಡಿ ನೋವೆಲ್ಲ ಉಕ್ಕಿ ಕಣ್ಣಲ್ಲೆ ಹೃದಯ ಹರಿದು..
ತನ್ನ ಪಾಡಿಗಿನ್ನೊಮ್ಮೆ ಕೊರಗಿ, ತಂತಾನೆ ದೂರ ಸರಿದು..

59. ಚಾರುಗಾತ್ರೆ! ನಾ ಬಂದೆನೊಲವಿನಲಿ ಪ್ರಣಯಪೂಜೆಗಾಗಿ
ಹೃದಯದೊಡತಿ! ನೀನನ್ನ ದೇವಿ, ನಾ ಬಂದೆ ಸೇವೆಗಾಗಿ!"
ಎನ್ನುತ್ತಿದ್ದನುಪಗುಪ್ತನೊಯ್ದನಾ ಪಾತ್ರೆ ತುಂಬ ತೀರ್ಥ
ಸುರಿದು ಮೈಗೆ ಕಾರುಣ್ಯ ತುಂಬಿ, ತೊಲಗೆಂದು ಭವದನರ್ಥ!

60. ಸುಯ್ಯುಸುಯ್ದನಂಬಲಿಯಗೈದು ಯತಿ ತಾನೆ ತುತ್ತನೂಡಿ
ತೊಡೆಯಲಿರಿಸಿದನು ದೀನದಲಿತೆಯನು ದಯೆಯ ಮದ್ದು ಮಾಡಿ,
ಮೂಡುಬಾನ ಕಾರ್ಮುಗಿಲ ಮರೆಯ ವೈಶಾಖ ಚಂದ್ರನುದಿಸೆ..
ನೋವು ಬೇಗೆಗಳ ಕಳೆದು, ಬೆಳಗಿ ತಂಪೆರೆದು, ನುಡಿದು ಹರಸೆ!
61. ಚೆಲುವೆ! ಕೊರಗದಿರು, ನನ್ನ ಪ್ರಣಯವಿದು, ಸೇವೆಯೆಂಬ ದೀಕ್ಷೆ!
ನನ್ನ ಸರದಿ, ನಾ ಬಂದೆನಿಲ್ಲಿ, ನನಗಿದುವೆ ಪ್ರೇಮ ಭಿಕ್ಷೆ..
ಹಿಂಗದಾಸೆ ಬಲು ನೋವಿನೊರತೆಯದು! ಕಾಮದಳದ ಧಾಳಿ-
ನುಗ್ಗುತಿರಲು ಸಂಯಮದ ಸತ್ವವಿದೆ ಕೋಟೆರೂಪ ತಾಳಿ!"

62. ಬೋಧನಾಮೃತದ ಸವಿಯನುಂಡು, ಮನಜಾಡ್ಯ ಕಳೆದು, ಜೀವ
ಕೆಟ್ಟ ಕನಸಿನಿಂದೆಚ್ಚರಾಗಿ, ಸುಪವಿತ್ರವಾಗಿ ಭಾವ!
ಬೇನೆ-ನೋವು ಪರೆಕಳೆಯುತಿರಲು, ಕಳೆಯೇರುತಿತ್ತು ಮೈಯ್ಗೆ!
ಅದ್ಭುತಾದ್ಭುತವು ಮಹಿಮನಾಟ ನಿಜವೆಂದು ಕಂಡುಕಣ್ಗೆ!

63. ಮಹಿಮ! ಬಾಳಿನಲಿ ಬಯಲುಬಯಕೆಯಲಿ ಬಳಲಿ ಕಳೆದೆ ದಿನವ,
ಭೋಗ-ರೋಗದಲಿ ಭವದ ಯೋಗವನು ಕೆಡಿಸಿಕೊಂಡೆ –ಮನವ
ಕಿಡಿಯನೂದಿ ದಳ್ಳುರಿಯನುರಿಸಿ ತನುಶ್ರೀಯ ಕೆಡಿಸಿಕೊಂಡೆ–
ತೀರದಾಸೆಯಲಿ, ತೀರಸೇರದಲೆ– ತೀರುವಾಸೆ ಕಂಡೆ

64. ಧರ್ಮದೀಪ ಹೊಗೆತುಂಬಿ ಬೆಳಕಿನೆಳೆ ದೂರ ಬೀರಲಿಲ್ಲ!
ತೋರಿಗುರಿಯ ಸರಿದಾಯಿಯರಿಯೆ ಗುರು ಸನಿಹ ಸೇರಲಿಲ್ಲ..
ವಿಷಯ ಶರಧಿಯಲಿ ಬೀಸುಗಾಳಿಯಲಿ ನೌಕೆಯೇರಿ ನಡೆದೆ,
ದೋಣಿ ಮುರಿದು, ಕಂಗೆಟ್ಟು ಮುಳುಗುತಿರೆ – ಕರುಣೆ ಕೈಯಪಿಡಿದೆ!"–

65. ಭವದ ವಿಜಯಗಾಯನದ ರೀತಿ ನುಣ್ಗೊರಲ ಗೀತಹಾಡಿ
ಬಯಲ ಹೊನಲು ಕಡಲೆದೆಯ ಸೇರುವೊಲು ದಯೆಯ ಶರಧಿ ಕೂಡಿ,
ವೇಶ್ಯೆಯವಳು ವ್ರತಪೂತೆಯಾಗಿ ಉಪಗುಪ್ತ –ಶಿಷ್ಯೆಯಾಗಿ..
ದೇಹಸುಖದ ದುಸ್ವಪ್ನ ಕಳೆದು ನಿಜ ಸುಖದ ಸವಿಗೆ ಮಾಗಿ!..

66. ನೋವು ಸುಟ್ಟ ನೆಲ ಮುಗಿಲರಸಗೆ ಹಸುರುಟ್ಟು ಹಿಗ್ಗುವಂತೆ..
ನವ್ಯ ಜೀವನವನಾಂತು, ಕಪ್ಪುರವು ಸುಡುವ ರೀತಿ ಕ್ರಾಂತೆ
ಬಾಳ ಬಳ್ಳಿಯಲಿ ಶಾಂತಿ ಸುಮವ ಪಡೆದಿಹಳು, ಯೋಗಿಯೆಡೆಗೆ
ಕಾಮಿಯಾಗಿ ಸಾಗಿದ್ದ ಕಾಂತೆ, ಕಾರುಣ್ಯ ಸವಿದು ಕೊನೆಗೆ!

ದೇವ

ಆಗೊಮ್ಮೆ ಈಗೊಮ್ಮೆ ತಳತಳನೆ ಹೊಳೆಯುತಿಹ
ಗಾಜುಮಣಿ ಕಿರಣದಂತೆ–
ಹಿಗ್ಗಿನಿಂದುಬ್ಬುತ್ತ, ಮಿಡಿಮಿಡಿದು, ಚಿಮ್ಮುತ್ತ
ಮಿಡಿತೆಯೊಂದಿದ್ದಿತಂತೆ!
"ನನ್ನ ಮೈಬಣ್ಣ ಹಸಿಹಸುರಾಗಿ, ಹಸನಾಗಿ
ಹೊಮ್ಮುತಿಹ ಚಿಗುರಿನಂತೆ–
ನೋಡಲ್ಲಿ ದೀಪದಡಿಯಿರುಳ ಕತ್ತಲೆ! ಕಣ್ಗೆ –
ಹೊಲಸು– ಕಾರಿದ್ದಲಂತೆ!..
"ದೇವನೆಂತಹ ದಯಾಸಾಂದ್ರ! ನನಗೀತನುವ
ಕರುಣಿಸಿಹ, ನಮಿಪೆನವಗೆ!"
ತನ್ನೊಳಗೆ ನುಡಿದು, ಕಿರುಮಿಡಿತೆಯಾನಂದದಲಿ
ಹರಿದಿತ್ತು ದೀಪದೆಡೆಗೆ!
"ಎನಿತು ನಿರ್ದಯದೇವ! –ಎನಗಿನಿತು ಆಹಾರ
ನಾಲ್ಕು ದಿನ ದೊರೆಯಲಿಲ್ಲ!"
ಪಾಪ! ಆ ಕರಿಬೆಕ್ಕು ಕಂಬನಿಯ ಸುರಿಸಿತ್ತು
ದೀಪದಡಿ ತೊರೆಯಲಿಲ್ಲ.
ನಲಿನಲಿದು ಮಿಡಿತೆಯದು ದೀಪವನು ಸುತ್ತುತ್ತ
ಹಾರುತಿರುವಲ್ಲಿ, ಬೆಕ್ಕು–
ಕಡುಲೋಭಿ ಬೀದಿಯಲಿ ನಿಧಿಯೊಂದ ಕಂಡಂತೆ–
ಹಿಡಿದಿತ್ತು!– ಒಮ್ಮೆ ನಕ್ಕು!
ಆಕ್ರೋಶದಿಂದ ಹುಳು ಚೀರಿತ್ತು ಬಾಯಲ್ಲಿ
"ದೇವ ನಿಷ್ಕರುಣ ಹೃದಯ!"
ಬೆಕ್ಕು ನಾಲಗೆಯಿಂದ ತುಟಿನೆಕ್ಕಿ, ನುಡಿದಿತ್ತು
"ಹಾ! ದೇವನೆನಿತು ಸದಯ."

ಕಾಣದ ಕಣ್ಣು

ಕೈಹಿಡಿದ ಮಡದಿಯಲಿ ರೂಪವಿಲ್ಲದ ಮೇಲೆ
ಏನಿದ್ದು ಫಲವೇನು? – ಎಂದು ಕೊರಗಿ..
ಯೌವನದ ಬಳ್ಳಿಯಲಿ ಲಾವಣ್ಯಸುಮವಿಲ್ಲ
ಬದುಕು ಬರಡಾಯ್ತೆಂದು ಗೊಣಗಿ, ಗೊಣಗಿ–
ದಿನದಿನವು ಆ ಹೆಣ್ಣ ಮುದ್ದು ಮಮತೆಯ ಹಳಿದು,
ಚೆಲುವಿನಾಸೆಯ ಬಲೆಗೆ ಬಿದ್ದು, ತೊಳಲಿ–
"ನನ್ನದಿದು ದೌರ್ಭಾಗ್ಯ!"–ವೆಂದ ಸುಗುಣದ ಮಣಿಯ
ತಳ್ಳಿ, ಗಾಜಿನತುಂಡನೆಣಿಸಿ, ಬಳಲಿ..
ದೈವಲೀಲೆಯೊಳೊಮ್ಮೆ ಬಂದಿತ್ತು ಮೈಲಿಗೆಯ
ಜಾಡ್ಯ–ಗಂಡನ ಮೈಯನೆಲ್ಲ ಕವಿದು
ಗುರುತಾಗಿ ಕಣ್ಣೆರಡು ಬಾಡಿದವು ಕುರುಡಾಗಿ –
ಬತ್ತಿದವು– ಚೆಲುವೆಲ್ಲ ಕತ್ತಲೆಂದು
ಕುರುಡನಲ್ಲದ ಮಡದಿ ಒಂದಿನಿಸು ಮರುಗದೆಯೆ–
ಸೇವೆಗೈದಳು ಸಖನ ಹಿತವನರಿತು!–
ಗಂಡಿನೆದೆಚೆಲ್ಲಿದ್ದ ಪ್ರೇಮಸುಧೆಯೆಲ್ಲವನು–
ಈಗ ಮನದಲಿ ತುಂಬಿ, ಬುದ್ಧಿಯರಿತು.
"ಮಾರ್ಗದರ್ಶಿನಿ! ನನ್ನ ಚರ್ಮಚಕ್ಷುಗಳಳಿದು
ಒಳಗಣ್ಣ ಮುಂದೆ ನೀನೆಷ್ಟು ಅಂದ!
ಹೊರಗಣ್ಣ ಕುರುಡುತನವಳಿದು, ಕಂಡಿಹೆ ನಿನ್ನ
–ಪ್ರೇಮದೊಡತಿಯೆ, ಚೆಲುವೆ! ಮನ್ನಿಸೆ'ಂದ.

ಕಾಯುತ್ತಿದ್ದೇವೆ

ಬಾಯಾರಿದ್ದರೂ,
ಬಾವಿಬಳಿಯಲ್ಲಿ ನೀರು ಮೇಲೇರಿ ಬಂದೀತೆಂದು–
ಕಾದು ಕುಳಿತಿದ್ದೇವೆ.
ಕಾವಲಿಯಲ್ಲಿ ಕಾಳು ಕಾದು ಕರಿಕಾಗುತ್ತಿದ್ದರೂ, ತೆಗೆಯದೆ;
ಹಸುನುಗ್ಗಿ ತೆನೆತಿನ್ನುತಿದ್ದರೂ ತಡೆಯದೆ;
ಮನೆಯುರಿದು ಬೂದಿಯಾಗುತಿದ್ದಾಗಲೂ,
ಅವನೇ ಕಾಯದಿದ್ದಾಗ,
ನಾವು ಕಾದೇನು ಫಲ?– ಎಂದು
ತೆಪ್ಪಗಾಗುತಿದ್ದೇವೆ..
ಬೀದಿ ಬದಿಯಲ್ಲಿ ಹೆಣಕಾದಂತೆ– ಬರಿಬಿಸಿಲಲ್ಲಿ
ಬರಲೊಲ್ಲದ ನಾಯಕನಿಗಾಗಿ ಕಾಯುತಿದ್ದೇವೆ
ಕಟ್ಟಿದ ಆಸ್ಪತ್ರೆ, ಶಾಲೆಗಳ ಹೊರನಿಂತು
ಕದತೆರೆಯೆ, ಮಂತ್ರಿಗಳಿಗಾಗಿ ಕಾಯುತಿದ್ದೇವೆ
ಕೆಲವೊಮ್ಮೆ,
ನಿಮಿಷದ ಕಾಲ್ನಡಿಗೆಗಾಗಿ
ಗಂಟೆಗಟ್ಟಳೆ ಬಸ್ಸು ಕಾಯುತಿದ್ದೇವೆ!
ಹಲವೊಮ್ಮೆ,
ಕುಳಿತು, ನಿದ್ದೆಗಾಗಿ ಕಾಯುತಿದ್ದೇವೆ.
ನಿಲ್ದಾಣದಲ್ಲಿ ಕಾದು,
ಬಂಡಿ ಸಾಗಿದ ಮೇಲೆ ಎಚ್ಚರಾಗಿ–
ನಾವೇಕೆ ತೆರಳಲಿಲ್ಲ ಎಂದು ಬೆಚ್ಚಿ ಬೀಳುತಿದ್ದೇವೆ
–ನಾವೆಲ್ಲ ನಾಡ ಕಾಯುತಿದ್ದೇವೆ.

ಸೃಷ್ಟಿ–ದೃಷ್ಟಿ

ಮುಂಜಾವದಿಂದಲೂ ಹಗಲು ಬಾಡುವ ತನಕ
ರಸಿಕಚಿತ್ರಿಕನೊಬ್ಬನೂರೊಳಲೆದು,
ಸರಸಸೃಷ್ಟಿಗೆ ಸ್ಫೂರ್ತಿ ಸನ್ನಿವೇಶವನರಸಿ,
ದೊರೆಯಲಾರದೆ, ಕೊರಗಿ, ಬಳಲಿ ನೊಂದು..
ಹಸಿದ ಮೊಲೆಗೂಸಿನ್ನು ಅಕ್ಕಕಕ್ಕಿಯರೆನಿತು–
ಸಂತೈಸಲೆಳಸಿದರು ನಗಲಾರದು!
ಪ್ರಕೃತಿ ಮಾತೆಯ ರಮ್ಯ ಪ್ರೇರಣೆಯ ಸುಮುಹೂರ್ತ–
ಮೂಡದಲೆ ಆವನಾಸೆ ಕೊನೆಗಾಣದು–
ಕೊನೆಗೆ ಹೊಲಗಳ ಕಡೆಗೆ ಕಣ್ಣುಹಾಯಿಸಿ, ಹಚ್ಚ–
ಹಸುರು ಪೈರಿನ ಮೇಲೆ ಪಾರಿವಾಳ
ತಂಗಿತ್ತು ಅಲ್ಲಲ್ಲಿ ಬಿಳಿಹೂವ ಚೆಲ್ಲಿದೊಲು–
ತೆನೆಹಾಲ ಕೆನೆಯಂತೆ ಪಕ್ಷಿಜಾಲ!
ಗಗನ ನೀಲಿಯ ರಮ್ಯತೆರೆಯ ಮುಂಗಡೆಯಲ್ಲಿ
ನಡೆದಿತ್ತು ಹಕ್ಕಿಗಳ ನೃತ್ಯಲಾಸ್ಯ!
ಕೊರಳಕೊಂಕಿಸಿ ಹುಲ್ಲಹಾಸು ಹಸುರಿನ ಮೇಲೆ–
ಉಕ್ಕಿತ್ತು ಹೃದಯರಸ ಕಂಡು ದೃಶ್ಯ!
ಬಾಯಾರಿದಾತ ನೀರನು ಕಂಡು ನಲಿವಂತೆ
ಆಸೆಗಣ್ಣಲಿ ಕಂಡ ನೋಟವದನು
ಹುಣ್ಣಿಮೆಗೆ ಕಡಲುಕ್ಕುವಂತೆ– ಚೇತನಗೊಂಡು
ಕಲ್ಪನೆಯ ರೇಖೆಗಳನೆಳೆಯಲವನು!
"ಹೊ ಹ್ಹೊ ಹೊ!" ಕೂಗಿನಾರ್ಭಟ ಬಡಿದು. [illegible]
ರಸಸಮಾಧಿಯು ಭಗ್ನಗೊಂಡಿತಾಗ!
ಹೊಲಗಳಲಿ ಹರಡಿರುವ ಪಾರಿವಾಳಗಳನ್ನು
ಬಡಿಗೆ ಹಿಡಿದೋಡಿಸಿದ ರೈತನಾಗ
ಹಕ್ಕಿಗಳು ಹೊಲನುಗ್ಗಿ ಕೊಳ್ಳೆ ಹೊಡೆಯುತ್ತಿರಲು
ಮರುಳನಿವ–ಓಡಿಸದೆ ಕುಳಿತನೇಕೆ?
ಕಲೆಗೆ ಸ್ಫೂರ್ತಿಯನ್ನಿತ್ತ ನೋಟ ಕೊನೆಗಂಡಿತೇ?
ಅವನು ಚೆಲುಹಕ್ಕಿಗಳ ಹೊಡೆದನೇಕೆ?..
ಎದೆಯೊಳಗೆ ಹೂತಿದ್ದ ನೆನಹ ಚಿಲುಮೆಯನೊಡೆದು
ಕುಂಚದಲಿ ಕಡೆದಿದ್ದ ಚಿತ್ರಶಿಲ್ಪ!
ಆ ಮಧುರ ಕೃತಿಯೊಳಗೆ ಹಕ್ಕಿಗಳ ಮೊಗದೊಳಗೆ
ಮೂಡಿತ್ತು ಭಯಭೀತಿ–ಭಾವಕಲ್ಪ!
ರಸಿಕಜನ ಮನಮೆಚ್ಚಿ ಜಯಭೇರಿ ಹೊಡೆದಿತ್ತು
'ಹಕ್ಕಿಗಳ ಚಿತ್ರ' ಮನ್ನಣೆಯ ಪಡೆಯೆ,
ಒಕ್ಕಲಿಗ ಬೆಳೆದಿದ್ದ ಹೊಲವನುಂಗುವ 'ಸೃಷ್ಟಿ'
ಒಲಿದ ಜನರೆದೆಯಲ್ಲಿ ಕರುಣೆಯಿದೆಯೆ?
ಮನದ ಕಣ್‌ಕಂಡಂತೆ ಕಲೆಯು ನೆಲೆಗಾಣುತಿದೆ
ಹಕ್ಕಿ ಮೊಗದಲಿ ಭಯದ ಭಾವದಂತೆ!
ಕಲೆಯ ಸ್ಪರ್ಶದಿ ನೋವು ನಲಿವಸೆಲೆಯಾಗುತಿದೆ
ಭೀತಿದರ್ಶನ ಸರಸವೆನಿಸುವಂತೆ.

ಹೊದಿಕೆಯೊಳಗೆ

ಹಡಗು ಮುಳುಗುತ್ತಿರಲು ಹೇರಿದ ಸರಕುಳನ್ನೆ
ಕಡಲಲ್ಲಿ ಒಗೆವಂತೆ,
ನಷ್ಟವೆನ್ನೆಷ್ಟು ಲೆಕ್ಕಿಸದೆ,
ಹೊದಿಕೆಯ ಅಭೇದ್ಯ ಕವಚ-ತೊಟ್ಟಿದ್ದೆ!
ಈ ದಟ್ಟ ಗೋಡೆಯ ಒಳಗೆ ಸೆರೆಸಿಕ್ಕ ಮಾರುತ
ಮೂಗು ನಾಲಗೆಯ ಪಾಲಿಗೆ ಬಂದ ಪಂಚಾಮೃತ!
ಕುಡಿಕೆತಳದ ಮಸಿಯ ಹೀರಿಕೊಂಡಂತೆ
ಗಾಳಿಯಗೋರಿ ಹೀರಿ ಗುಂಡಿಗೆಯ ತುಂಬಿದರೂ,
ಬಕಮಾರಿ ಎದೆ-ಒಂದೆ ಚಣ
ಸುಳಿದ ಮಾರುತಿಯನ್ನೆ ಸುಲಿದು ನಿಸ್ಸತ್ವಗೊಳಿಸಿ,
ಅದು ಬರಿ ಬಂಡಿಯನ್ನುಳಿಸಿದ ಬಕ-ಧ್ವಂಸಿಯಂತೆ-
ಸರಕ ಸೂರೆ ಮಾಡಿ ಹಿಂದೆ- ತಳ್ಳಿತ್ತು!
ಹೃದಯರಂಗದ ಏಕಾಂತದಲ್ಲಿ
ಚಾರಿತ್ರ್ಯ ಸೂರೆಗೊಂಡವಳಂತೆ
ಮೈಲಿಗೆಯಾಗಿ ಬಿಸಿಯಾಗಿ
ಗಾಳಿ ಉಬ್ಬೆಗಗೊಂಡು ಹೊರಹೊರಟಾಗ..
ಮತ್ತೆ ಕರೆ!
ರಕ್ತದ ಕರೆ ಕರೆ!
ಹೊರಗಾದವಳ ಬಳಿ ಸೆಳೆವ
ಎಳೆದೊದೆವ ದುಶ್ಯಾಸನ ಕ್ರೀಡೆ!
ನಿರಂತರ ಪೀಡೆ!
ಈ ಕಂಬಳಿಯ ಬೋನೊಳಗೆ,
ನನ್ನಂತೆ ಚಳಿಹಿಡಿದ
ಒಂದೆರಡು ಸೊಳ್ಳೆಗಳ ಗಾನಲಹರಿ
ನನ್ನ ಗುಣಗಾನ ಬೀರಿ
ಮತ್ತೆ ಪ್ರಾಣಾಪಹಾರಿಯಾಗಿ
ಕೆನ್ನೀರ ಹೀರಿದ್ದು..
ನಾನು ಹಲ್ಕಿರಿದದ್ದು-
ಗುರುಗುರು ಸದ್ದು..
ಎಲ್ಲ ಎಂಜಲ ತಿಪ್ಪೆಯ ಸರಹದ್ದು!
ಮಕ್ಷಿಕಾಧ್ವಂಸಕ್ಕಾಗಿ ಶಾಪಹಸ್ತವನ್ನೆತ್ತಿದರೆ-
ಆ ಹಸ್ತ ನನ್ನ ಮುಸುಡನೆ ಜಜ್ಜಬಹುದಲ್ಲ!-
ಎಂದು,
ತೆಪ್ಪಗಾಗಿ,
'ಹ್ಹೂ'ಗರೆದು,
ಮೈ ಕೊರೆದು,
ಮತ್ತಷ್ಟು ಮುದುಡಿ-
ಗರ್ಭವಾಸದ 'ಪೋಸಿ'ನಲ್ಲಿದ್ದೇನೆ.

ಗುರು-ಶುಕ್ರ

ಹರಡಿದ ಬೂದಿಯಲಿ ಕಿಡಿಕೆಂಡಗಳಿದ್ದರೂ,
ಬರಿಯುಸಿರ ನೀರೇ ಸುರಿದಿದ್ದರೂ
ಗಿಡ ಬಾಡಲಾಗದು.
ಬೆವರು ಹರಿಸಿ
ಕಣ್ಣೀರು (ಅದು ಆನಂದಾಶ್ರುವೇ ಇರಲಿ!) ಸುರಿಸಿ–
ಕೃಷಿ ನಡೆಯಬೇಕು!
ಹೂಬಿಡುವ ಕಾಲಕ್ಕೆ–
ನುಗ್ಗುವ ಗೂಳಿಗಳ ಕೋಡಹಿಡಿದು ಜಗ್ಗಬೇಕು!
ಹಾವು ಹೆಡೆಯರಳಿ, ಮೈಹೊರಳಿಸಿ ಸುಳಿದಾಗ
'ಜೋ' ಹಾಡಿ,
ಬಿಲದ ಬುಟ್ಟಿಯಲಿ ಮತ್ತೆ ಮಲಗಿಸಬೇಕು!
ಬಿರುಗಾಳಿ, ಸುಂಟರಗಾಳಿ ಬೀಸಿ ಘಾಸಿಯಾಗದಂತೆ–
ನಡುವೆ ತಡೆಯುವ ಗೋಡೆಯಾಗಬೇಕು!
ಬಾಯಿ ಕತ್ತಿಯ ಮೇಲೆ
ತಕತಕನೆ ನೆಗೆದು,
ಬೇಗೆಬೆಂಕಿಯ ಬಳೆಯೊಳಗೆ
ಮೈ ನುಸುಳಿಕೊಂಡು
ಹಸಿದ ಹುಲಿಯ ಹಲ್ಲುಗುರುಗಳ ಮೊಂಡು ಮಾಡುತ್ತಾ..

ಬೆಚ್ಚಿದರೂ, ಬಿದ್ದರೂ
ಕೋಡಂಗಿ ನಗೆನಕ್ಕು–
ಸರ್ಕಸ್ಸು ನಡೆಯಬೇಕು!
ನೂರಕ್ಕೆ ನೂರು 'ಸಕ್ಸೆಸ್' ಗಳಿಸಬೇಕು!
ಬಿಳಿಹಾಳೆ ಸೀರೆಯಲಿ ಕಪ್ಪು ಚಿಕ್ಕೆಗಳನೆಣಿಸಿ,
ಅಂಚಿನಲಿ ಕೆಂಪು ಜರಿಬಳಿದು,
ಅದನು ತಲೆತುಂಬ ರುಮಾಲು ಸುತ್ತಿ
ಕನ್ನಡಿಯಲ್ಲಿ ತನ್ನ ತಾನೇ ನೋಡಿಕೊಂಡು–
ಹಿಗ್ಗಬೇಕು!
ಹಿಂದೊಮ್ಮೆ ದೇವತೆಗಳ ಗುರುವೆಂದು–
ಗೌರವದ ಗಿರಿಯಲಿದ್ದ ಇವನಿಗೆ–
ಇಂದು– 'ಮೃತ್ಯುಕಂದರ'ಕೆ ವರ್ಗವಾಗಿ
ದಾನವರ್ಗಕೆ ಮೃತಸಂಜೀವಿನಿಯ–
ಧಾರೆಯೆರೆವ
'ಒಕ್ಕಣ್ಣ ಶುಕ್ರ'ನೆಂಬ
ಪ್ರಶಸ್ತಿಗೆ – ಕರೆಬಂದಿದೆ!

ಇವರು

ಕಾನೂನು ಕೋಟೆಯಲಿ ಕುಂಟುಪಂಕ್ತಿಯ ಒಳದಾರಿ ಕೊರೆದು
ಗೇರುಬೀಜದಂತೆ ಹೊರಗುಳಿದ ನಿರ್ಲಿಪ್ತರಿವರು!
ಹೆರರ ಮಕ್ಕಳ ತಳ್ಳಿ ಬಾವಿಯಾಳವನಳೆದವರು
ಬೆರಳಿಗೆ ಎಣ್ಣೆ ಸವರಿಕೊಂಡೇ ತೊಳೆ ಸುಲಿದು ಸವಿದವರು
ಪತ್ನೀಪುತ್ರ, ಬಂಧುಮಿತ್ರರಿಗಾಗಿ
ದೇಶವನೇ ಸೇವಿಸಿ, ತಾವೇನನ್ನೂ ಹಚ್ಚಿಕೊಳ್ಳದೆ-
'ದಿವಾಳಿ' ತೆಗೆದ ನಿಸ್ವಾರ್ಥಿಗಳಿವರು!
ವಿಧಿವಿಧೇಯನಾಗಿ
ಹೇಳಿದ ದಾರಿಯಲಿ ನಡೆದು, ಬಳಲಿ
ಫಲವಿಲ್ಲವೆಂದು ಕಂಗಾಲಾದಾಗ-
ದಾರಿ ತೋರಿಸಿದ ಇವರೇ ಬೇಲಿ ಹಾರಿ -
ಮುಂದಾಗಿ ಸೇರಿ-
'ಅಯ್ಯೋ ಮಂಕೆ!' ಎಂದಾಗ..
ಇವರು-
ಹುಲಿಬೇಟೆಗ ಬೇಡಬಲೆ ಹರಡಿ, ಹೊಂಚಿಕುಳಿತು,
ಸೊಳ್ಳೆಗಳ ಹಿಡಿದು ಕೆಡೆದವರು!
ಇವರಿಂದ-
ತನ್ನ ಭಕ್ತರ ಅರಗಿನಮನೆಯಿಂದ ತಪ್ಪಿಸಿ,
ಅನಾಥರು ಅಲ್ಲಿ ತಂಗಿದ್ದಾಗ,
ಬೆಂಕಿ ಕೊಟ್ಟದ್ದು -
ಈ ಭಾರತದಲಿ 'ಲಾಕ್ಷಾಗೃಹದಹನ'ದ ಹೊಸ ಹಳೆಯ ಕಥೆ!

ಏನೇ ಆದರೂ..

ಬಾಡಿಗೆಯ ಮನೆಯೇ ಆದರೂ-
ಒಂದು ದಿನವೂ ಇಲ್ಲಿ ದೀಪವಾರಿಲ್ಲ,
ಸೂರ್ಯನೊಮ್ಮೆಯೂ ಹಗಲು ನಿದ್ದೆ ಹೋಗಿಲ್ಲ!
ಮರೆಯಾಟವಾಡಿ, ಮತ್ತೆ ಮುಖತುಂಬ ನಕ್ಕುನಗಿಸುವ
ಚಂದಮಾಮನ ಕಾಣದೆ ತಿಂಗಳಿಲ್ಲ!
ಬಾಗಿಲಬಳಿ, ಬೆಲೆಹೇಳಿ, ಮುಷ್ಕರತಾಳಿ, ಗಾಳಿಮೂಗು ಕಟ್ಟಿಲ್ಲ
ಉರಿ, ಉರಿದು ನೊಂದು, ಕಂಬನಿ ಸುರಿದು ನೊಂದಿಲ್ಲ!
ಮನೆಯ ಮಾಡಿನ ಹೊದಿಕೆಯ ಬಣ್ಣ ಮಾಸಿಲ್ಲ,
ಅಲ್ಲಲ್ಲಿ ಜರಿ ಚುಕ್ಕೆಯ ಥಳಕೂ ಕುಂದಿಲ್ಲ!
ಎಲ್ಲೆಡೆಗೂ ನಲ್ಲಿ ಹರಡಿದ ನೀಲ ತೊಟ್ಟಿಯಲಿ
ತೊಟ್ಟು ನೀರೂ ಆರಿಲ್ಲ!
ಏನೇ ಆದರೂ,
ವರ್ಷಕ್ಕೊಮ್ಮೆ
ಹಸುರು ಚಿಗುರು ತೋರಣ ಕಟ್ಟಿ
ಹೂಗೊಂಡೆ, ಹಣ್ಣುಗೊಂಚಲು ತೂಗುವುದು-ತಪ್ಪಿಲ್ಲ!
ಓಲಗದ ಹಕ್ಕಿಯ ಕತ್ತು ಹಿಸುಕಿಲ್ಲ!
ರೆಕ್ಕೆ ಸುಟ್ಟಿಲ್ಲ!
ಒಳಗೆ,
ತೊಟ್ಟಿಲ ಮಗುವ ಮುಗುಳಿನಲಿ
ಒಂದಿಷ್ಟು ಮುಳ್ಳಿಲ್ಲ!
ಕರುಳ ತಾಯಿಬೇರಿಗೆ ಗೆದ್ದಲು ಹಿಡಿದಿಲ್ಲ!
ಹೊತ್ತ ಮೈ ಕೊಡಹಿ, ಕೆಡೆಪಿಲ್ಲ!
ಎಂದ ಮೇಲೆ- ಮತ್ತೇಕೆ ಚಿಂತೆ?

ಬೆಕ್ಕು

ಮನೆಯೊಳಗೆ 'ಮೊಸರುಕುಡಿಕೆ' ನಡೆದಾಗಲೇ
ಮಾರ್ಜಾಲ ರಹಸ್ಯಯಾತ್ರೆಯ ಮಾಗಧಭೇರಿ ಬಾರಿಸಿದ್ದು ನನಗೆ!
ಬೆಕ್ಕು ತಾನಾಗಿ ಮನೆಸೇರಿಕೊಂಡರೆ ಮದುವೆಯಾಗುವುದಂತೆ!
–ಇರಬಹುದು.
ಮದುಮಗಳಂತೆ ನಾಚಿ,
ಸೆರಗು ಬಾಲವನು ಕುಣಿಸಿ
ಬೆಣ್ಣೆಗಾಲಲಿ ತಣ್ಣಗೆ ಸುಳಿದ ಇವಳಿಗೆ–
ನಡುರಾತ್ರಿಯ ಮುಹೂರ್ತದಲ್ಲಿ
ಒಲೆಯ ಮುಂದೆ– ಅಗ್ನಿಸಾಕ್ಷಿಯಾಗಿ
ಪ್ರೇಮೋಪಾಸನೆ ನಡೆದು,
ಮದುಮಕ್ಕಳ ಮೊದಲ ರಾತ್ರಿಯಲಿ
ಹಾಲಿನ ಪಾತ್ರೆ ಬರಿದಾಗಿರಬಹುದು!
(ಬಹುಶಃ ಆಕೆಗೆ ಈಗ ಮರಿಗಳಿರಬಹುದು!)
ಈ ಬೆಕ್ಕು,
    ಸಭ್ಯತೆಯ ಗೆರೆ ಮೀರಿ,
    ಹೂಮೈಯ ಬೆಡಗ ಬೀರಿ,
    ಸವಿನಿದ್ದೆಯ ಕೊನೆಜಾವದಲ್ಲಿ
    ನನ್ನ ಮೆಲ್ಹಾಸಿನಲಿ ಪವಡಿಸಿದೂ ಉಂಟು!
    ಕೆಲವೊಮ್ಮೆ, ತೊಟ್ಟಿಲಲಿ ಕಂದಮ್ಮನ ಬಳಿ ಮುದುಡಿ
    ತಾನೂ ಜೋಗುಳ ಹಾಡಿಸಿಕೊಂಡುದೂ ಉಂಟು!
ಕೊಡಲಿಯ ರಾಮ ತೊಳೆದು ಕೈತೊಳೆದುಕೊಂಡರೂ,
ಮುಗಿದಿಲ್ಲ ಇದಕಿನ್ನು ಇಪ್ಪತ್ತೊಂದನೆಯ ಬಾರಿ!
ನವನೀತಚೋರನ ಈ ಸಂಸಾರಿ–
ಮುಂಜಾವದೆಳೆಬಿಸಿಲ ಹಸುರ ಹಸೆಯಲಿ ಕುಳಿತು
ಅಂಗೈಯ ನೆಕ್ಕುವುದು ಸಾರಿ, ಸಾರಿ..
(ಹೀಗೆ 'ಮುಂಡಾಸುಕಟ್ಟಿ'ದರೆ ಬೆಕ್ಕು ಮನೆಗೆ
ನೆಂಟರು ಬರುತ್ತಾರಂತೆ!
ದಯವಿಟ್ಟು ನೀವು ನುಸುಳಬೇಡಿ!)
ಮೊದಲು ಮೆತ್ತಗೆ ಇದರ ಅಂಗಾಲು ಅರಳು ಹೂ..
    ಈಗ ಚಿಗುರಿತು– ಮುಳ್ಳುಗುರು!
    ಕಳ್ಳಪೇಟೆಯ ಸೊತ್ತಿಗೆ ಬೆಲೆಯೂ ಹೆಚ್ಚು!
ಸವಿಯೂ ಮೆಚ್ಚು!
ಕಳ್ಳಮಾಲಿನ ರುಚಿ ಹಿಡಿದ ಕಳ್ಳಿಗೆ–
ಮೈಗಳ್ಳತನ ಮೂಡಿ,
ಇಲಿಜಿರಲೆಗಳಿಗಿಲ್ಲ– ಇಲ್ಲಿ ನಮಗಿರಿವಷ್ಟು ಬೆಕ್ಕ ಭೀತಿ!
ಮನೆಯೊಳಗೆ,
    ಮೂಲೆ ಮೂಲೆಗಳಲ್ಲಿ ಮುಚ್ಚಿಕೊಳ್ಳುವ ಮೂಗು!
    ಮೀಸೆಯೆಂಜಲ ಸವಿನೋಡುವ ನಾಲಗೆ!
    ಕೇಳಿಸದ ಸದ್ದಿಗೆ ಬೆಚ್ಚಿ ಕಿವುಡಾದ ಕಿವಿ!
    ಮುಳ್ಳುಗಬ್ಬದ ಸುಳ್ಳುನುಣುಪಿನ ತೊಗಲ–ಸೋಂಕು!
ಮುಖತುಂಬ ಬೆಕ್ಕಿನ ಕಣ್ಣು!


ಗಡಿಯಾರ

ಗೋಡೆಯಲಿ ನಿನ್ನ ಶಿಲುಬೆಗೇರಿಸಿದ್ದು,
ಮಣಿಕಟ್ಟಿನಲಿ, ಸಂಕೋಲೆ ಹಾಕಿ ಬಂಧಿಸಿಟ್ಟದ್ದು-
ಏಕೆಂದು?
ಕಾಲನ ಕಿವಿಹಿಂಡಬಲ್ಲೆನೆನ್ನುವ ಪೌರುಷದ ಪ್ರತಿಮೆಯಾಗಿ..
ಸೃಷ್ಟಿ ಸಾಧನೆಯ ಬಂಗಾರದ ಹಾರಕ್ಕೆ ಪದಕವೆಂದು - ಮಾತ್ರ!
ಮಾನವಕೃತಿ ಹಿರಿದಾದಂತೆ ನೀನು ಕಿರಿದಾದಿ!
ನಿನ್ನ ಹೆಜ್ಜೆಯ ಗೆಜ್ಜೆನಾದವನು ಮೌನಸೀಮೆಗೆ ತಳ್ಳಿ,
ಬೇಕೆಂದಾಗ ಸಹಿಹಾಕುವ ಅಂತಸ್ಸಾಕ್ಷಿಯಂತೆ
ಮೊಗದೋರಿ 'ಜೀ! ಹಜೂರ್' ಎಂದು-
ಜೋಲು ನಾಲಗೆ ಕುಣಿಸಿ
ಕೈಚಾಚುತ್ತಿರಬೇಕು!
ನೀ ನಿದ್ದೆ ಹೋದಾಗ ಎಲ್ಲರೂ ನಿನ್ನ ಕಿವಿ ಹಿಂಡುವವರೆ!
ಕಣ್ಣಿಗೆ ಎಣ್ಣೆ ಸುರಿಯುವವರೆ!

ನೀನಾರ ಕಿವಿಹಿಂಡಬಲ್ಲೆ?
ನೀನು ಸಿಲುಬೆಯಿಂದಿಳಿದು.
ಮಲಗಿದವರನೆಬ್ಬಿಸಬಲ್ಲೆಯಾ?
ಸಂಕಲೆ ಕಡಿದು, ಕಟ್ಟಿಕೊಂಡವರ ಬಿಡಿಸಬಲ್ಲೆಯಾ?
ಇಲ್ಲ!
ನಿನ್ನ ಅಂಕೆಗೆ ಯಾರೂ ಬೆಲೆಕೊಡದೆ
ನಿನ್ನುಸಿರು ನವನಾಗರಿಕತೆಯಲಿ ಕಾಡು ಕರ್ಕಶವಾಗಿ
'ಕಾಲ ಕವಿರಚಿತ ಧ್ವನಿಪೂರ್ಣಕಾವ್ಯ'-
ಎಂಬ ನಿನ್ನ ಹೆಗ್ಗಳಿಕೆ
ಧ್ವನಿಶೂನ್ಯ ಚಿತ್ರ ಚಮತ್ಕಾರ ಭೂಷಣವಾಗಿ-
ಸವೆದ ಕವಿಸಮಯವಾಯ್ತು-
ಸಮಯ!
ದಿನದ ದೀರ್ಘವಾಕ್ಯದ ಕೊನೆಯ ಪೂರ್ಣವಿರಾಮದ ಬಿಂದು

ಚಿತ್ತ-ಚಿತ್ರಣ

ಮುಳುಗುತಿಹ ಸೂರ್ಯನಿಂದು!
ಸೂರ್ಯಪ್ರಭೆಗೆ ಹೆಗಲ ಹಿಂಗಡೆ ನೆರಳು– ಕರಿಯ ಇರುಳ ಹೆರಳು!
ಸಂಜೆಯ ಹೊತ್ತಿಗೆ ಬಾನಂಚಿನಲ್ಲಿ ನೋಡ!– ಮಜ್ಜನದಿ ಭುವಿತಲೆಗುಚ್ಚಿದ 'ಶಾಂಪೂ; ನೊರೆಯ ಮೋಡ!
ಬಾನ ಬಟ್ಟೆಯನುಜ್ಜಿ, ಉಜ್ಜಿ ಹುಣ್ಣಿಮೆಯ ತುಂಬು ಚಂದಿರ ಸೋಪು– ಪಕ್ಷವೊಂದರಲಿ ಸವೆದುಹೋಯ್ತು!
ವರ್ಷರಸರಾಗಕ್ಕೆ ಗಂಟಲು ಸರಿಪಡಿಸಿಕೊಂಡನೋ ಬಾನು– ಅದೋ ಮೊಳಗುತಿದೆ ಗುಡುಗು!..
ನಿನ್ನೆ ಸಂಜೆಯ ದೋರೆಕಾಯಿ ನೇಸರನನ್ನು ಇರುಳಬುಟ್ಟಿಯಲಿಟ್ಟು –ಮುಂಜಾವ ಕಂಡದ್ದು ಕೆಂಪು ಹಣ್ಣು!
ಇರುಳ ಮೌನದ ಚೀಲ ಹರಿದು ಸದ್ದು ಸುರಿದಂತೆ – ಕೋಳಿ ಕೂಗಿತು!
ನಿಶೆಯ ನಿಲ್ದಾಣದಲಿ ನಿಂತ ಬದುಕಿನ ಬಂಡಿಗೆ– ಮುನ್ನಡೆಯ ಸಂಜ್ಞೆ – ಕೋಳಿ ಕೂಗು!
ಮೂಡುತಿದೆ ಬಾಗುತಲಿ ಬೀಜಾಂಕುರ– ಆವುದೋ ಫಲವು ಗುರಿ! – ಭುವಿಧನುರ್ಧರ!
ಹಾವು ನಾಲಗೆಚಾಚಿ ದಾರಿ ಹುಡುಕುವ ರೀತಿ – ಸೈಕಲಿನ ಮುಂಗಾಲಿಯ ಚಪಲಗಮನ!
ಮಾರ್ಗ–ಕಾವ್ಯ ಶ್ರವಣದಿ ಮೂಡಿದ ಆಶ್ಚರ್ಯಚಿಹ್ನೆಗಳು! – ಪಕ್ಕದಲಿ ನಿಂತ ಸಾಲು ಕಂಬಗಳು!
ಕುಪ್ಪಳಿಸುವ ಕಪ್ಪೆಗಳಲ್ಲಿ ಕೆಸರಿಗೂ ಚೇತನ ಚಿಮ್ಮುವುದುಂಟು.
ಚಂದ್ರಾಸ್ತಮಾನದಲಿ ಕಡಲೇ ಮೊಸರಿನ ಗಡಿಗೆ, – ಅಲ್ಲೊಂದು ಬೆಣ್ಣೆಯ ಮುದ್ದೆ–ಚಂದ್ರ!
ಒಲೆಯ ಕಾವಿಂಗೆ ಪಾತ್ರೆಯ ಹಾಲುಕ್ಕಿದಂತೆ– ಸ್ಫೂರ್ತ ಹೃದಯದ ರೀತಿ!
ಹಕ್ಕಿಯೊಂದು ನೆಲದಿಂದ ಬಾನೆಡೆಗೆ ಹಾರಿತ್ತು – ಗಾಳಿ ಹಲಗೆಯಲಿ ಉದ್ಧಾರದ ರೇಖಾಚಿತ್ರವೆಳೆದಿತ್ತು



ಶ್ರೀ ಸೀ. ಹೊಸಬೆಟ್ಟು ಅವರು ಕನ್ನಡದ ಪ್ರಾಚಾರ್ಯರಾಗಿ ನನಗೆ ಪ್ರಿಯರಾಗಿದ್ದವರು. ಈಗ ಕನ್ನಡದ ಸುಕವಿಗಳಾಗಿ ನನಗೆ ಆತ್ಮೀಯರಾಗಿದ್ದಾರೆ. ಸ್ತೋತ್ರಾರ್ಹರಾಗಿದ್ದಾರೆ, ಪ್ರೋತ್ಸಾಹಾರ್ಹರಾಗಿದ್ದಾರೆ. ಶ್ರೀಯುತರ ಯಾವ ಕವನದ ಕಡೆಗೆ ಕಿವಿ ಮಾಲಿದರೂ ಸಾಕು. ಇವರದು ಕವಿಮನೋಧರ್ಮವೆಂಬುದು ಒಡನೆಯೇ ತಿಳಿಯುತ್ತದೆ. ದಯಾಸಾಗರನಾದ ಉಪಗುಪ್ತ ಬೌದ್ಧನ ದೇವಶಾಂತಿಯ ಪ್ರಭಾವಕ್ಕೆ ಒಳಗಾಗಿ ಬೆಳಕು ಕಂಡುಕೊಂಡ ವೇಶ್ಯೆಯೊಬ್ಬಳ ಪ್ರಸಂಗವನ್ನು ವರ್ಣಿಸುವ 264 ಸಾಲುಗಳ ಅರುವತ್ತಾರು ಪದ್ಯಗಳ ಕಥನಕವನವಾದರೂ ಸರಿಯೆ, ಒಂದೋ, ಎರಡೋ ಸಾಲಿನ ಚಿತ್ತ-ಚಿತ್ರಣವಾದರೂ ಸರಿಯೆ – ಇವನ್ನು ಕವಿಯಲ್ಲದೆ ಹೀಗೆ ಬೇರೊಬ್ಬನು ಹೇಳಲಾರ ಎನ್ನಿಸುತ್ತದೆ.

ಎಸ್.ವಿ.ಪರಮೇಶ್ವರ ಭಟ್ಟ